# ಅಪರಂಜಿ

ತಿಳಿನಗೆಯ ಕಾರಂಜಿ

ಮಾರ್ಚ್ 2019




ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 36**

**ಸಂಚಿಕೆ – 06**

**ಮಾರ್ಚ್ – 2019**

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಎಂ. ಶಿವಕುಮಾರ್ | 3 |
| ಕತೆಗಾರ | ಪ್ರಕಾಶ್ | 5 |
| ದಿಕ್ಕುತಪ್ಪಿ! | ನುಗ್ಗೆಹಳ್ಳಿ ಪಂಕಜ | 6 |
| ಎಂಭತ್ತು ಪರ್‌ಸೆಂಟಿಗಾಗಿ | ಎಚ್. ಶಾಂತರಾಜ ಐತಾಳ | 9 |
| ಆಹಾ ಹೈಟೆಕ್ ಆಸ್ಪತ್ರೆ....! | ಗುಂಡುರಾವ್ ದೇಸಾಯಿ | 11 |
| ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ | ಅನಾಮಧೇಯ | 14 |
| ''ಕ(ಳ)ಸಗಿತ್ತಿಯರು'' | ಪರಿಮಳ ಬಿ. | 19 |
| ಮೈಸೂರು ಪಾಕ್! ಬಹುಪರಾಕ್!! | ನಳಿನಿ ಸರ್ಯಪ್ರಕಾಶ್ | 21 |
| ಕಾರ್ಟೂನ್ ಪ್ರಸನ್ನ | ಸಂಕೇತ್ ಗುರುದತ್ | 24 |
| ಮಗಳ ಉಡುಗೊರೆ | ಶಿಲ್ಪ | 27 |
| ಇರುವೆ ನೀನೆಲ್ಲೆಲ್ಲೂ ಇರುವೆ | ರಘುನಂದನ | 30 |
| ತುಂತುರು | ದಂನಆ | 35 |
| ಯುನಿವರ್ಸಲ್ ವಿಮರ್ಶೆ | ಸೂರಿ ಹಾರ್ದಳ್ಳಿ | 36 |
| ಅರ್ಥವಿಲ್ಲದ ಪತ್ರ | ಎಂ.ಆರ್. ನಾಗರಾಜ ರಾವ್ | 39 |


**ವ್ಯಂಗ್ಯಚಿತ್ರ : ಮುಖಪುಟ – ಇಂಟರ್ ನೆಟ್ ಕೃಪೆ**
**ಒಳಪುಟ – ರಘುಪತಿ ಶೃಂಗೇರಿ**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



"ಎಚ್ಚೆತ್ತ ಭಾರತ ಎತ್ತ ಸಾಗಿದೆ?" ಎಂದು ತಿ.ತಾ. ಶರ್ಮರು
ಅಂದು ಕೇಳಿದ ಪ್ರಶ್ನೆಗೆ –

**'ಇಂದು ಉತ್ತರ ಸಿಕ್ಕಂತಾಯಿತು'**
**ಎಂದು ಅಪರಂಜಿ ಸಂತಸಿದಳಂತೆ**

*****

ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗೆ ಸರ್ಪಗಾವಲು – ಶೀರ್ಷಿಕೆ

**ಸರ್ಪಗಳ ಒಕ್ಕೂಟ ಪ್ರತಿಭಟಿಸಿವೆಯಂತೆ !!**

*****

ಏರ್ ಷೋ : ಅಕ್ರಮ ನೌಕೆ ನಾಶಕ್ಕೆ ಗರುಡ – ಸುದ್ದಿ

**ಅಕ್ರಮ, ಸಕ್ರಮವಾಗಬಾರದು ಅಷ್ಟೇ !!**

*****

ಮಕ್ಕಳಲ್ಲ, ಶಿಕ್ಷಕರೇ ಶಾಲೆಗೆ ಚಕ್ಕರ್ – ವಾರ್ತೆ

**ಮಕ್ಕಳು ನಲಿದಾಡಬಹುದು. !!**

ಕೊರವಂಜಿ ಉತ್ಸವ –ಪತ್ರಿಕೆ

**ನನ್ನನ್ನು ಆಹ್ವಾನಿಸುತ್ತಾರೆಯೇ ಎಂದು ಅಪರಂಜಿ ಪಲುಕಿದಳಂತೆ. !!**

(ಕಣಿ ಹೇಳುವ ಕೊರವಂಜಿ ಜನಾಂಗದ ಸಮ್ಮೇಳನದ ವರದಿ
ಎಂಬ ಸ್ಪಷ್ಟೀಕರಣ!– ಸಂಪಾದಕ)

*****

ಪ್ರಿಯಾಂಕ ಸಕ್ರಿಯ ರಾಜಕೀಯಕ್ಕೆ – ಸುದ್ದಿ

**ಕಿರಿಯಕ್ಕನ ಚಾಳಿ.........!!**

*****

ಮೋದಿಯಿಂದ ದೇಶದ್ರೋಹ : ರಾಹುಲ್ – ಪತ್ರಿಕೆ

**ದ್ರೋಹ ಎಂಬ ಪದವನೇ ಪರಿಷ್ಕರಿಸಬೇಕು.**

*****

ಎತ್ತರಿಸಿದ ರಸ್ತೆಗೆ ವಿರೋಧದ ಕಹಳೆ – ಸುದ್ದಿ

**ಸಾಲುಮರಗಳು ತತ್ತರಿಸಿದವಂತೆ !!**

*****

## “ನಮ್ಮ ನಿಮ್ಮಲ್ಲಿ ”

ಮೊನ್ನೆ ಸಂಜೆ ಬೇರೇ ಏನೂ ಕೆಲಸವಿಲ್ಲದ್ದರಿಂದ ಟಿ.ವಿಯಲ್ಲಿ ಯೂಟ್ಯೂಬ್ ಸರ್ಫ್ ಮಾಡುತ್ತಿದ್ದೆ. ಬಿಫೋರ್ ಸನ್‌ರೈಸ್ ಎಂಬ ರೊಮ್ಯಾಂಟಿಕ್ ಮೂವಿಯೊಂದರ ಟ್ರೈಲರ್ ಕಣ್ಣಿಗೆ ಬಿತ್ತು. ಪೂರ್ತಿ ಮೂವಿ ಯೂಟ್ಯೂಬಿನಲ್ಲಿ ಇರಲಿಲ್ಲ. ನೆಟ್‌ಫ್ಲಿಕ್ಸ್, ಅಮೆಜಾನ್ ಎಲ್ಲಾ ಹುಡುಕಾಡಿ ಕೊನೆಗೆ ಡೇಲೀಮೋಷನಲ್ಲಿ ಮೂವಿ ನೋಡಲು ಸಾಧ್ಯವಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಇದೊಂದು ಪ್ರಣಯದ ಕಥೆ. ಇಪ್ಪತ್ತರ ಆಸುಪಾಸಿನ ಯುವಕ ಯುವತಿಯರಿಬ್ಬರು ರೈಲು ಪ್ರಯಾಣದಲ್ಲಿ ಆಕಸ್ಮಾತ್ ಭೇಟಿಯಾಗಿ ಲೋಕಾಭಿರಾಮವಾಗಿ ಮಾತು ಪ್ರಾರಂಭಿಸುತ್ತಾರೆ. ಮಾತುಕತೆ ಮುಂದುವರಿದಂತೆ ಇಬ್ಬರಿಗೂ ಈ ಸಂಭಾಷಣೆ ತೀರ ಅಪ್ಯಾಯಮಾನವಾಗಿ ಕಂಡು, ಮುಂದಿನ ಸ್ಟೇಷನಿನಲ್ಲಿ ಇಬ್ಬರೂ ಇಳಿದು ಆ ಊರಿನಲ್ಲಿ ಮಾರನೆಯ ಬೆಳಗಿನ ವರೆಗೂ ಕಾಲ ಕಳೆದು ಅನಂತರ ಅವರು ತಮ್ಮ ತಮ್ಮ ದಾರಿಯನ್ನು ಹಿಡಿಯುತ್ತಾರೆ. ಇದನ್ನು ಓದಿ ಅವರ ಒನ್ ನೈಟ್ ಸ್ಟಾಂಡಿನ ಬಗ್ಗೆ ಇಷ್ಟೇಕೆ ಗದ್ದಲ ಅಂತ ನೀವು ಹುಬ್ಬೇರಿಸಬಹುದು. ಈ ಮೂವಿಯ ಹೆಚ್ಚುಗಾರಿಕೆಯೆಂದರೆ ಅವರುಗಳ ನಡುವಿನ ಸಹಜ ಸಂಭಾಷಣೆ. ಚಿತ್ರದುದ್ದಕ್ಕೂ ನಡೆಯುವ ಈ ಸಹಜ ಸಂಭಾಷಣೆಯೇ ಚಿತ್ರದ ಜೀವಾಳ. ಅವರ ಮಾತುಗಳು ಒಂದು ಚಿತ್ರಕ್ಕೆ ಬರೆದ ಸಂಭಾಷಣೆಯಂತೆ ಕಾಣುವುದೇ ಇಲ್ಲ. ಆಕಸ್ಮಾತ್ ಯಾರಾದರೂ ಅಪರಿಚಿತರನ್ನು ಭೇಟಿಮಾಡಿದರೆ ನಡೆಯುವ ಆಶು ಸಂಭಾಷಣೆ, ಅಂತಹ ಮಾತುಕತೆಯಲ್ಲಿನ ತಾತ್ಕಾಲಿಕತೆ ಇವೆಲ್ಲವೂ ಈ ಚಿತ್ರದಲ್ಲಿ ಬಹು ಸಹಜವಾಗಿ ಮೂಡಿಬಂದಿರುವುದರಿಂದ ಈ ಮೂವಿ ವೀಕ್ಷಣೆ ಒಂದು ಅಪೂರ್ವವಾದ ಅನುಭವವೆನಿಸಿತು. ಚಿತ್ರದ ನಿರ್ದೇಶಕ ರಿಛರ್ಡ್



ಲಿಂಕ್‌ಲೇಟರ್ ಈ ಚಿತ್ರೀಕರಣವನ್ನು ಮಾಡಿದ್ದು 1995 ರಲ್ಲಿ. ಬಾಕ್ಸ್‌ಆಫೀಸಿನಲ್ಲಿ ಈ ಚಿತ್ರ ಬಹುವಾಗಿ ಯಶಸ್ಸನ್ನು ಕಂಡಿದ್ದರಿಂದ 2003 ರಲ್ಲಿ ಈ ಚಿತ್ರದ ಸೀಕ್ವೆಲ್ ಬಿಫೋರ್ ಸನ್‌ಸೆಟ್ ಬಿಡುಗಡೆಯಾಯಿತು. ಹಿಂದಿನ ಚಿತ್ರದಲ್ಲಿ ನಟಿಸಿದ್ದ ಈಥನ್ ಹಾಕ್ ಮತ್ತು ಜೂಲಿ ಡೆಲ್ಪಿ ಇವರುಗಳೇ ಈ ಚಿತ್ರದಲ್ಲೂ ಕಾಣಿಸಿಕೊಳ್ಳುತ್ತಾರೆ. ಹತ್ತು ವರ್ಷಗಳ ನಂತರದ ಭೇಟಿ ಈ ಹಳೆಯ ಪ್ರಣಯಿಗಳನ್ನು ಇನ್ನೂ ಹೆಚ್ಚು ಹತ್ತಿರ ತರುವುದರಲ್ಲಿ ಸಫಲವಾಗುತ್ತದೆ. ಇಲ್ಲೂ ಸಹಾ ಒಂದು ದಿನದ ಮಟ್ಟಿಗೆ ಅವರಿಬ್ಬರೂ ಪ್ಯಾರಿಸ್ಸಿನಲ್ಲಿ ಓಡಾಡಿ ಅತ್ಯಂತ ಚೇತೋಹಾರಿ ಸಂಭಾಷಣೆ ನಡೆಸುವುದನ್ನು ನೋಡಿದ ನಂತರ ಈ ಟ್ರಿಲೋಜಿ ಏಕೆ ಅಷ್ಟೊಂದು ಖ್ಯಾತಿಯನ್ನು ಪಡೆಯಿತು ಎಂಬುದು ಅರ್ಥವಾಯಿತು.

ಹೌದು, ಇದೊಂದು ಟ್ರಿಲೋಜಿ. ಇದರ ಮೂರನೆಯ ಭಾಗ ಬಿಫೋರ್ ಮಿಡ್‌ನೈಟ್ 2013 ರಲ್ಲಿ ಬಿಡುಗಡೆಯಾಗಿ ಅತ್ಯಂತ ಜನಪ್ರಿಯವಾಯಿತು. ಈ ಚಿತ್ರದ ಹೊತ್ತಿಗೆ ಹಾಕ್‌ಗೆ ನಲವತ್ತು ವರ್ಷವಾದರೆ ಜೂಲಿಗೆ ಮೂವತ್ತೆಂಟು. ಇಬ್ಬರಿಗೂ ಪರಸ್ಪರ ಮದುವೆಯಾಗಿ ಹತ್ತು ವರ್ಷಗಳು ಕಳೆದಿರುತ್ತವೆ. ಗ್ರೀಸ್‌ನ ಹಳ್ಳಿಯೊಂದರಲ್ಲಿ ನಡೆಯುವ ಈ ಚಿತ್ರಕಥೆಯಲ್ಲಿಯೂ ಗಂಡ ಹೆಂಡಿರ ನಡುವಣ ಸಂಭಾಷಣೆಗೇ ಪ್ರಾಧಾನ್ಯ. ಒಂದು ವ್ಯತ್ಯಾಸವೆಂದರೆ ನಿಜ ಜೀವನದಲ್ಲಿ ನಡೆಯುವಂತೆ ಈ ಚಿತ್ರದಲ್ಲಿ ಇವರ ಮಾತುಕತೆಗಳಲ್ಲಿ ಮುಕ್ಕಾಲುಪಾಲು ಜಗಳ, ವೈಮನಸ್ಯ ತುಂಬಿರುತ್ತದೆ. ಅವರ ಜಗಳ ಶುರುವಾಗುವ, ಮುಂದುವರಿಯುವ ಮತ್ತು ಅತೃಪ್ತಿಯಿಂದ ಉಪಶಮನವಾಗುವ ರೀತಿಯನ್ನು ನೋಡಿದರೆ ಇಂದಿನ ಈ ವಯಸ್ಸಿನ ಯಾವುದೇ ದೇಶದ, ಭಾಷೆಯ ಜೋಡಿಯ ಜಗಳಕ್ಕೆ ತೀರಾ ಸಾಮ್ಯವಿರುವುದನ್ನು ಗಮನಿಸಬಹುದು.

ಇನ್ನೊಂದು ಸ್ವಾರಸ್ಯಕರ ಅಂಶವೆಂದರೆ ಈ ಜೋಡಿ ಗ್ರೀಸ್‌ನಲ್ಲಿನ ಒಂದು ಹೋಮ್‌ಸ್ಟೇ ನಲ್ಲಿ ಮಧ್ಯಾಹ್ನದ ಲಂಚ್ ಸ್ವೀಕರಿಸುವ ದೃಶ್ಯ. ಇವರ ಟೇಬಲ್ಲಿನಲ್ಲಿ ಇನ್ನೂ ಮೂರು ಜೋಡಿಗಳು ಕೂತಿದ್ದು ಎಲ್ಲರೂ ಕಾಡುಹರಟೆಯಲ್ಲಿ ಮಗ್ನರಾಗಿರುತ್ತಾರೆ. ಈ ಹರಟೆ ಎಷ್ಟು ಸ್ವಾಭಾವಿಕವಾಗಿ ಕಾಣುತ್ತೆಂದರೆ ಇದಕ್ಕೆ ಒಂದು ಸ್ಕ್ರಿಪ್ಟ್ ಬರೆಯುವ ಅಗತ್ಯವೇ ಇಲ್ಲ ಎನಿಸುವ ಮಟ್ಟಿಗೆ. ಮುಂದೆ ನಿರ್ದೇಶಕ ಲಿಂಕ್‌ಲೇಟರ್ ಒಂದು ಸಂದರ್ಶನದಲ್ಲಿ ಈ ಹರಟೆ ಸಂಪೂರ್ಣವಾಗಿ ತನ್ನ ಸ್ಕ್ರಿಪ್ಟ್ ಪ್ರಕಾರ ಇದ್ದದ್ದರ ಬಗ್ಗೆ ಹೇಳಿದಾಗ ನನಗಾದ ಆಶ್ಚರ್ಯ ಹೇಳತೀರದು.

ಯಾವುದೇ ಉದಯೋನ್ಮುಖ ಸಾಹಿತಿ ಅತ್ಯುತ್ಕೃಷ್ಟ ಸಂಭಾಷಣೆಯನ್ನು ಬರೆಯುವ ಆಶೆ, ಗುರಿಯನ್ನು ಹೊಂದಿದ್ದರೆ, ಈ ಬಿಫೋರ್ ಟ್ರಿಲೋಜಿ ಅಂತಹ ಸಾಹಿತಿಗೆ ಅತಿ ಉಪಯುಕ್ತ ಹೊಳಹುಗಳನ್ನು ಸೂಚಿಸುವುದರಲ್ಲಿ ಸಫಲವಾಗುತ್ತದೆ. ರೊಮ್ಯಾಂಟಿಕ್ ಮೂವಿ ಕ್ಯಾಟಗೆರಿಯಲ್ಲಿ ಹಂಫ್ರಿ ಬೋಗರ್ಟ್ ನಟಿಸಿರುವ ಕ್ಯಾಸಬ್ಲಾಂಕಾ, ಷಿರ್ಲೇ ಮೆಕ್‌ಲೇನ್‌ಳ ಅಪಾರ್ಟ್‌ಮೆಂಟ್ ನಂತರ ಅತ್ಯಂತ ಖುಷಿ ಕೊಟ್ಟ ಚಿತ್ರಗಳೆಂದರೆ ಈ ಬಿಫೋರ್ ಟ್ರಿಲೋಜಿ ಎಂದು ಹೇಳಲು ನನಗೆ ಯಾವ ಹಿಂಜರಿಕೆಯೂ ಇಲ್ಲ.

**ಎಂ. ಶಿವಕುಮಾರ್**

# ಕತೆಗಾರ

● **ಪ್ರಕಾಶ್**

ಗಡಿಯಾರದ ಮುಳ್ಳುಗಳು ಕೈ ಜೋಡಿಸಿ ಹನ್ನೆರಡಾಯಿತು ಎಂದು ಸೂಚಿಸಿದವು. ಮೇಜಿನ ಬಳಿ ಕುಳಿತಿದ್ದವನು ಬೇಸರದಿಂದ ನಿಟ್ಟುಸಿರು ಬಿಟ್ಟ. ಮಾಸಪತ್ರಿಕೆಯೊಂದಕ್ಕೆ ಹಲವಾರು ವರ್ಷಗಳಿಂದ ಕಥೆಗಳನ್ನು ಬರೆಯುತ್ತಿದ್ದ ಈ ಲೇಖಕನ ಖ್ಯಾತಿ ನಾಡಿನಲ್ಲೆಲ್ಲಾ ಹರಡಿತ್ತು. ಮಾನವ ಜೀವನದ ಏರುಪೇರುಗಳು, ಸ್ವಭಾವಗಳ ವೈವಿಧ್ಯತೆ, ಬಡವ ಬಲ್ಲಿದರ ಜೀವನದೃಷ್ಟಿ – ಇವೆಲ್ಲವನ್ನೂ ಅವನ ಕಥೆಗಳು ಹಾಸ್ಯದ ಲೇಪದೊಂದಿಗೆ ಬಹು ಆಕರ್ಷಕವಾಗಿ ಮೂಡಿಸುತ್ತಿದ್ದವು. ಇಂದು ಏಕೋ ಆತನಿಗೆ ಸೃಜನಶೀಲತೆಯ ಸೆಲೆಯೇ ಬರಡಾದಂತೆ ಅನಿಸತೊಡಗಿತ್ತು. ಸೇದಿದ ಸಿಗರೇಟ್ ತುಂಡುಗಳು ತಮ್ಮ ಸಂಖ್ಯೆಯಿಂದಲೇ ಅವನನ್ನು ಅಣಕಿಸುತ್ತಿದ್ದವು. ನಿಮಿಷಗಳು ಸರಿಯತೊಡಗಿದಂತೆ ಅವನ ಮನಸ್ಸು ಅನೇಕ ದಿಸೆಗಳಲ್ಲಿ ಹರಿದಾಡಿತು.

ಪತ್ರಿಕೆಯ ಸಂಪಾದಕರಿಗೆ ಈ ತಿಂಗಳು ನನ್ನ ಕಥೆ ಇಲ್ಲ ಎಂದು ಇ–ಮೇಲ್ ಕಳಿಸಬಿಡಲೇ ಎಂಬ ಆಲೋಚನೆ ಮನಸ್ಸಿಗೆ ಬಂತು. ಮರುಕ್ಷಣವೇ, ಸ್ವಲ್ಪ ನಿಧಾನಿಸು, ಹೀಗೆ ಹಿಂದೆ ಕೂಡಾ ಅನೇಕ ಬಾರಿ ಆಗಿದೆ, ಎಂದೂ ನೀನು ಸೋಲನ್ನು ಒಪ್ಪಿಕೊಂಡಿಲ್ಲ ಎಂಬ ಆಶಾವಾದಿತ್ವ ಹಿಂದಿನ ಚಿಂತನೆಯನ್ನು ಹೊರದೂಡಿತು. ಆತ ತನ್ನ ಅಗಾಧ ಸರಕುಗಳಿಂದ ತುಂಬಿದ್ದ ತನ ಮನದ ಉಗ್ರಾಣವನ್ನು ಶೋಧಿಸತೊಡಗಿದ. ಬಾಲ್ಯದ, ತಾರುಣ್ಯದ ಅನೇಕ ಘಟನೆಗಳು ಮನಃಪಟಲದಲ್ಲಿ ಹರಿದಾಡಿದವು. ಇಲ್ಲ, ಇಂದು ಯಾವುದೂ ಸರಿಹೊಂದುತ್ತಿಲ್ಲ. ಹೊಳೆದದ್ದೆಲ್ಲಾ ನಿಸ್ಸಾರ. ಏನೋ ಒಂದು ಬಗೆಯ ಖಾಲಿತನ ಮನಸ್ಸನ್ನು ಆವರಿಸಿತ್ತು. ನಿಧಾನವಾಗಿ ರೂಮಿನಲ್ಲಿ ಓಡಾಡಿದ ಆತ. ಮನಸ್ಸು ಶಾಂತವಾಗಿಲ್ಲದೆ ಕಥೆ ಎಲ್ಲಿ ಹುಟ್ಟುತ್ತೆ ಎಂದುಕೊಳ್ಳುತ್ತಿದ್ದಂತೆ ಆತನ ತುಟಿಗಳ ಮೇಲೆ ಮಂದಹಾಸವೊಂದು ಮೂಡಿತು. ಬೂದಿ ತುಂಬಿದ ಆ್ಯಷ್ ಟ್ರೇಯನ್ನೇ ದೃಷ್ಟಿಸಿ ನೋಡಿದ. ಕೊನೆಗೆ ಎಲ್ಲವೂ ಇಷ್ಟೇ ಅಲ್ಲವೇ? ಮಾನವರು ಏಕೆ ಇಲ್ಲದ ಸಮಸ್ಯೆಗಳನ್ನು ಸೃಷ್ಟಿಸಿ ಜೀವನದಲ್ಲಿನ ರಸನಿಮಿಷಗಳನ್ನು ಅನುಭವಿಸಲು ಅಸಮರ್ಥರಾಗುತ್ತಾರೆ ಎಂಬ ಮಹಾ ದರ್ಶನದ ಹೊಳಹೊಂದು ಅವನ ಮನದಲ್ಲಿ ಮಿಂಚಿತು.

ಆ ಕ್ಷಣದಲ್ಲೇ ಎಲ್ಲಿಂದಲೋ ಸಣ್ಣ ಆಲೋಚನೆಯೊಂದು ಮನದಾಳದಲ್ಲಿ ಸ್ಫುರಿಸಿತು. ಬಹು ಹಳೆಯ ಸಂಗತಿಯೊಂದು ಮನದಲ್ಲಿ ತೇಲಿಬಂತು. ಸಂತಸದ ನಗೆಯೊಂದು ಅವನ ವದನವನ್ನು ಬೆಳಗಿತು. ಕಂಪ್ಯೂಟರಿನ ಮುಂದೆ ಕುಳಿತಿದ್ದ ಆತ ತನ ಮುಂದಿದ್ದ ಕೀಬೋರ್ಡಿನ ಮೇಲೆ ಬೆರಳಾಡಿಸುತ್ತಾ ತನ್ನ ಲೇಖನವನ್ನು ಹೀಗೆ ಪ್ರಾರಂಭಿಸಿದ – "ಗಡಿಯಾರದ ಮುಳ್ಳುಗಳು ಕೈ ಜೋಡಿಸಿ ಹನ್ನೆರಡಾಯಿತು ಎಂದು ಸೂಚಿಸಿದವು. ಮೇಜಿನ ಬಳಿ.......................

■

# ದಿಕ್ಕುತಪ್ಪಿ!

**• ನುಗ್ಗೆಹಳ್ಳಿ ಪಂಕಜ**

"ಏನಿದು! ಬರಿಗೈಲಿ ಬಂದ್ರಿ! ಎಲ್ಲಾ ಜೀವ?" ತಾನು ಆದೇಶ ಕೊಟ್ಟಂತ್ತೆ ಎಳಕೊಂಡು ಬರದೆ ಬರಿಗೈಯಲ್ಲಿ ಹಿಂತಿರುಗಿದ ತನ್ನ ಕಿಂಕರರನ್ನ ನೋಡಿ ಅರ್ಭಟಿಸಿದ, ಯಮಧರ್ಮರಾಯ.

"ನಮಗೆ ದಿಕ್ಕು ತಪ್ಪಿಹೋಯ್ತು ಪ್ರಭು" ಗೋಳಾಡಿದ್ರು, ಆ ಆಜಾನುಬಾಹುಗಳು "ಸದ್ಯ, ಇಲ್ಲಿಗೆ ಹಿಂತಿರುಗಿ ಬರೋದೇ ಪ್ರಯಾಸವಾಯ್ತು......"

"ಹೌದು ಪ್ರಭು, ನಮ್ಮ ದಾರಿ ಎಲ್ಲಾ ಒಂದೇ ಅಸ್ತವ್ಯಸ್ತ! ಎಲ್ಲೆಲ್ಲೂ ಹಾರುತ್ತಾ ಇರೋ ಅದೆಂಥಾದ್ದೋ ವಿಚಿತ್ರ ಆಕಾರದ ತಟ್ಟೆಗಳು, ನಾನಾ ಗಾತ್ರದ ಲೋಟಾಗಳು,! ಅದನ್ನೆಲ್ಲಾ ತಳ್ಳ್ಕೊಂಡು ಸ್ವಲ್ಪ ಮುಂದೆ ಹೋದ್ರೆ, ನಮ್ಮನ್ನೇ ಕತ್ತರಿಸಿ ಹಾಕೋಹಾಗೆ ನಾಲ್ಕೂ ಕಡೆಯಿಂದ ಬರೋ ಮೊಸಳೆಗಳು–ತಿಮಿಂಗಿಲಗಳು! ಅದೇನ್ ಭಯಂಕರ ಶಬ್ದ ಅಂತೀರಿ, ಪ್ರಭು! ಅದ್ರ ಒಳಗಡೆ ಮಾನವರೂ ಕೂತಿದ್ ಹಾಗೆ ಕಾಣಿಸ್ತು; ಅದೆಂಥಾದ್ದೋ 'ಮಾರಾಸ್! ಮಾರಾಸ್!' ಅಂತ ಕೂಗ್ತಾ ಇದ್ರು! ನಡುನಡುವೆ, ಕೆಳಗಿರೋ ಭೂಲೋಕದವರ ಹತ್ರಾನೂ ಏನೇನೋ ಮಾತಾಡ್ತಿದ್ರು! ಊ ಪ್ರಭು! ನಮ್ಮನ್ನ ಮುಂದಕ್ಕೆ ಹೋಗೋಕ್ಕೆ ಬಿಡ್ಲೇಒಲ್ಲು, ಪ್ರಭು! ಅದ್ರಿಂದ ಹೇಗೋ ತಪ್ಪಿಸ್ಕೊಂಡು ಮುಂದೆ ಹೋದ್ರೆ, ಇಡೀ ಅಂತರಿಕ್ಷಾನೇ ನಡುಗೋ ಹಾಗೆ ಬುಸಗುಟ್ತಾ, ಪಾಪ, ಬಡಪಾಯಿ ನಮ್ಮ ಚಂದ್ರನನ್ನ ಹಿಂಸೆ ಮಾಡೋ ನೂರಾರು–ಸಹಸ್ರಾರು ಭಯಂಕರ ಹಾವುಗಳು–ಹೆಬ್ಬಾವುಗಳು! ಅವುಗಳ ನಾಲಿಗೆಯಿಂದ ಒಂದು ಕೆಟ್ಟ ಬೆಂಕಿ ಬರತ್ತೆ–ಬರತ್ತೆ, ಬರತ್ತೆ ಪ್ರಭು, ಅಲ್ಲಿರೋ ನವಗ್ರಹಗಳೆಲ್ಲ ನಡುಗೋಕ್ಕೆ ಶುರುಮಾಡ್ಬಿಟ್ಟಿದಾರೆ! ಇನ್ನು ನಮ್ಮ ಪಾಡೇನು? ಅದಕ್ಕೆ ಓಡೋಡಿ ಬಂದ್ಬಿಟ್ಟೆವು." ಹೀಗೆಂದು ಇನ್ನೊಬ್ಬನೂ ದನಿಗೂಡಿಸಲು, ಯಮನಿಗೆ ಸಿಟ್ಟು ತಡೆಯದಾಯ್ತು.

"ಆಹಾ, ತುಂಬಾ ಒಳ್ಳೆ ಕೆಲಸ ಮಾಡಿದ್ರಿ! ಶುದ್ಧ ಹೇಡಿಗಳು!" ಹಂಗಿಸಿದನು.

"ಆದಿಕಾಲದಿಂದ ನನ್ನ ಹತ್ರ ಇದ್ದು ತರಬೇತಿ ಪಡೆದಿದ್ದಕ್ಕೆ ಸಾರ್ಥಕ ಆಯ್ತು! ಇನ್ನೂ ನೆನ್ನೆ ಮೊನ್ನೆ ಬಂದವರೇ ವಾಸಿ! ಶುದ್ಧ ಅಪ್ರಯೋಜಕರು! ನಿಮಗಿಂತ ಆ ರಂಭೆ, ಊರ್ವಶಿ, ಮೇನಕೆಯರೇ ಮೇಲು– ನೃತ್ಯ ಮಾಡ್ತಾ ಮಾಡ್ತಾನೇ, ಎಂಥೆಂಥಾ ದೊಡ್ಡ ದೊಡ್ಡ ಜೀವಗಳ್ನೂ ಚಿಟಿಕೆ ಹೊಡೆಯೋದ್ರೊಳಗೆ ಎಳ್ಕೊಂಡ್ ಬಂದು ನಮ್ಮುಂದೆ ಹಾಜರ್ ಪಡಿಸಿಬಿಡ್ತಾರೆ......" ಎಂದೆಲ್ಲಾ ಕೂಗಾಡಿದವನೇ ಬೇರೊಂದು ನುರಿತ ಪಡೆಯನ್ನು ಕಳುಹಿಸಿದನು–ತನ್ನ ಲೋಕಕ್ಕೆ ಬರಲೇಬೇಕಾಗಿದ್ದ ಆ ಜೀವದ ನಂಬರ್–ವಿಳಾಸ, ಎಲ್ಲವನ್ನೂ ಕರೆಕ್ಟಾಗಿ ಕೊಟ್ಟು.

ಆದ್ರೆ, ಅವರುಗಳು ಬರಿಗೈಯಲ್ಲೇ ಹಿಂತಿರುಗಿದ್ರು! ಅವರ ಅನುಭವ ಇನ್ನೂ ಭೀಕರವಾಗಿತ್ತು. ಆದಿಕಾಲದಿಂದ ಇದೇ ಕೆಲಸನ ಮಾಡಿಮಾಡಿ, ಚಿಟ್ಟು ಹಿಡಿದುಹೋಗಿ, ಈ ರೀತಿ ಕಥೆ ಕಟ್ತಿದಾರೋ, ಅಂತನ್ನಿಸ್ತು!. ಅವರ ಅನುಭವ ಹೀಗಿತ್ತು:–

ಅದು ಯಾವ ಓಬಿರಾಯನ ಕಾಲದ ಕಾಲದ್ದೋ, ಯಮ ತನ್ನ ಈ ದೂತರ ಕೈಲಿ ಇಟ್ಟ ನಕ್ಷೆ ಅಪ್ರಯೋಜಕವಾಗಿ ಪರಿಣಮಿಸಿತು! ಅದ್ರಲ್ಲಿದ್ದ ಒಂದಾದ್ರೂ ಹೆಗ್ಗುರುತು ಇರ್ಬೇಕಲ್ಲ?

"ಆ ಮರಗಳೇ ಈಗಿಲ್ಲ ಪ್ರಭು!" ಉದ್ಗರಿಸಿದ್ರು. "ಗುಬ್ಬಚ್ಚಿ ಇಲ್ಲ–ಕೋಗಿಲೆ ಇಲ್ಲ, ಬರೀ ನಾಯಿ–ನಾಯಿ–ನಾಯಿ, ಎಲ್ಲೆಲ್ಲೂ! ಆ ಹಿಂದಿನ ಯಾವ ರಸ್ತೇನೂ ಈಗಿಲ್ಲ ಪ್ರಭು! ಎಲ್ಲಾ ಏಕ್ ದಮ್ ಬದಲಾಯಿಸಿ ಬಿಟ್ಟಿವೆ! ಆ ದೊಡ್ಡ ದೊಡ್ಡ ಮನೆಗಳೆಲ್ಲ ಈಗ ಆಕಾಶದವರೆಗೂ ಬೆಳೆದು ನಿಂತಿರೋ ಇಲಿ ಗೂಡುಗಳು! ಎಲ್ಲೆಲ್ಲೂ ರಾಕ್ಷಸ ವಾಹನಗಳ ಓಕಾಟ, ಭೂಲೋಕದಲ್ಲಿ ಯಾರೂ ಹಿಂದಿನ ಹಾಗೆ ನಡೆಯೋದೇ ಇಲ್ಲ ಪ್ರಭು! ರಸ್ತೇಲಿ ಜಾಗ ಇದ್ರೆ ತಾನೆ ನಡಿಯೋಕ್ಕೆ! ಅದೆಂಥಾದ್ದೋ ಟೈಮೂ ಇಲ್ವಂತೆ, ಯಾರ ಹತ್ರಾನೂ ಮಾತಾಡೊಕ್ಕೆ! ಸದ್ ಕೆಲಸ, ಕೆಲಸ! ನಮ್ಮ ದೇವಲೋಕದ ಅಪ್ಸರೆಯರೇ ಉಡಲ್ಲ, ಅಂಥಾ ಉಡುಪುಗಳು, ನರ್ತನಗಳು, ಅಮೃತಗಳು! ಒಬ್ಬೊಬ್ಬ ಭೂಲೋಕದ ಅಪ್ಸರೇನೂ ನಮ್ಮ ರಂಬೆ, ಮೇನಕೆ, ಊರ್ವಶಿ, ಎಲ್ರನ್ನೂ ಮೀರಿಸಿದಾರೆ ಪ್ರಭು, ಹಾವಭಾವದಲ್ಲಿ! ಹಾಯಾಗಿ. ಅಲ್ಲೇ ಇದ್ದುಬಿಡೋಣ, ಅವರನ್ನೇ ನೋಡ್ತಾ, ಆ ಭೂಲೋಕದ ಮದಿರೇನ ಕುಡೀತಾ, ಅನ್ಸತ್ತೆ..."

'ಇದು ಅತಿಯಾಯ್ತು, ಯಮನಿಗೆ ಸಿಟ್ಟು ಬಂದ್ರೆ ಕಷ್ಟ, ಶಾಪ ಕೊಟ್ಟು, ನಿಜಕ್ಕೂ ಆ ಭೂಲೋಕಕ್ಕೇ ರವಾನೆ ಮಾಡಿಬಿಡೋವ್ನೇ!' ಹೋಗೀ ಹೋಗೀ ಆ ಮಾನವರ ಜೊತೆ ಇರೋದೇ!

'ಛೆ! ತಮ್ಮ ಸ್ಥಾನ ಏನು, ಆ ನರಮನುಷ್ಯರ ಸ್ಥಾನ ಏನು! ತನ್ನ ಜೊತೆ ಬಂದ ಈ ದೂತನಿಗೆ ಸ್ವಲ್ಪಾನೂ ಬುದ್ಧಿನೇ ಇಲ್ಲ' ಎಂದು ಆತಂಕಗೊಂಡ ಇನ್ನೊಬ್ಬಾತ ಅವಸರವಸರವಾಗಿ ಬಾಯಿಹಾಕಿದ.

"ಅಲ್ಲ ಪ್ರಭು, ನೀವೇ ಹೇಳಿ ಪ್ರಭು, ಹೀಗೆ ಹೆಗ್ಗುರುತುಗಳೆಲ್ಲಾ ಸಂಪೂರ್ಣ ಬದಲಾಯಿಸಿ ಹೋದ್ರೆ, ನಾವು ಎಲ್ಲಿಂತ, ಹೇಗೆಂತ, ನಮಗೆ ಬೇಕಾದ ಜೀವಾನ ಹುಡುಕೋದು? ಗುರುತಿಸೋದು?"

ಅವನು ಹೇಳೋದು ಸರಿ ಎನ್ನಿಸ್ತು, ಯಮ ಧರ್ಮರಾಯನಿಗೂ. ಯಾವತ್ತೂ, ಯಾರಿಗೂ, ಎಂಥಹ ಸಂಕಷ್ಟ ಸಮಯದಲ್ಲೂ, ಇಂಥಹದೊಂದು ಜಟಿಲ ಸಮಸ್ಯೆ ಎದುರಾಗಿರಲಿಲ್ಲ. ಯಾರ ಮೊರೆ ಹೋಗಿ ಇದನ್ನ ಪರಿಹರಿಸೋದು?

ಸ್ವರ್ಗ ಲೋಕದಲ್ಲಿರುವವರಿಗೆಲ್ಲ ಶ್ರೀಮಾನ್ ನಾರದ ಮುನಿಯೇ ಆನರರಿ ಕನ್ಸಲ್‌ಟೆಂಟ್. ಆತನಿಗೂ ಆ ಕೆಲಸ ಇಷ್ಟ ಕಾರಣ, ನಿಂತಲ್ಲೇ ಸಮಾಚಾರಗಳು ತಿಳಿಯುತ್ತಿತ್ತು; ಸಮಯಕ್ಕೆ ಉಪಯೋಗವಾಗಿತ್ತು.

ಯಮ ಧರ್ಮರಾಯ ಕರೆದದ್ದೇ ತಡ, ಕಾದಿದ್ದವರಂತೆ ಕಾಣಿಸಿಕೊಂಡ್ರು. ತಮ್ಮ ದಿವ್ಯ ದೃಷ್ಟಿಯಿಂದ ಸಮಸ್ಯೆಯನ್ನು ಗ್ರಹಿಸಿದ ನಾರದರು ಹೇಳಿದರು. "ಭೂಲೋಕ ಹಿಂದಿನ ಹಾಗಲ್ಲ–ಬಹಳ ಬದಲಾಯಿಸ್ಬಿಟ್ಟಿದೆ! ಹೆಗ್ಗುರುತುಗಳೆಲ್ಲ ಮಾಯವಾಗಿ, ದಿನಕ್ಕೊಂದು– ಒಂದೇಕೆ, ಹತ್ತಾರು ಬದಲಾವಣೆಗಳು ತಲೆದೋರಿ, ನಂಗೇ ಹಿಂದಿನಂತೆ ಸರಾಗವಾಗಿ ಸಂಚಾರ ಮಾಡೋಕ್ಕಾಗ್ತಿಲ್ಲ. ಎಲ್ಲೆಲ್ಲೋ ಸಿಕ್ ಹಾಕ್ಕೊಂಡು ತಡವರಿಸ್ತೀನಿ– ಮತ್ತೆ ನಿಮ್ಮ ಪಾಡೇನು! ನಾರಾಯಣ–ನಾರಾಯಣ!"

"ಮತ್ತೆ, ಏನಾದ್ರೂ ದಾರಿ ತೋರಿಸಿ" ಯಮ ಬೇಡಿದನು. "ನಮಗೆ ಏನ್ಮಾಡೋಕ್ಕೂ ಗೊತ್ತಾಗ್ತಿಲ್ಲ. ಇವತ್ತು ಕಳೆಯೋದ್ರೊಳಗೆ ಆ ಜೀವ ನನ್ನ ಕೈಲಿರಲೇಬೇಕು!"

“ಆ ಜೀವ ಇರೋದು ಒಂದು ದೊಡ್ಡ ಬಿಲ್ಡಿಂಗಲ್ಲಿ. ಹತ್ತನೆಯ ಮಹಡಿಯಲ್ಲಿ, ಏಳ್ನೂರು ನಂಬರಿನ ಫ್ಲ್ಯಾಟ್‌ನಲ್ಲಿ. ಆ ಬಿಲ್ಡಿಂಗ್ ನಮ್ಮ ಸೂರ್ಯ ದೇವನಿಗೆ ಗೊತ್ತುಂಟು; ಸಂಜೆ ಮನೆಗೆ ಹೋಗೋವಾಗ ಕರ್‌ಕೊಂಡು ಹೋಗಿಬಿಡ್ತಾನೆ, ಭದ್ರ, ಜ್ಞಾಪಕವಾಗಿ ಆ ಏಳ್ನೂರನೆ ನಂಬರ್ ಫ್ಲ್ಯಾಟ್‌ಗೆ ಹೋಗು. ಅಪ್ಪಿತಪ್ಪಿ ಕೂಡ ಬೇರೆ ಫ್ಲ್ಯಾಟ್‌ಗೆ ಹೋಗ್ಬೇಡ, ಅಭ್ಯಾಸವಾಗತ್ತಷ್ಟೆ. ನೀನು ಕರ್‌ಕೊಂಡು ಬರ್ಬೇಕಾಗಿರೋ ಜೀವದ ನಂಬರ್ ಜ್ಞಾಪಕ ಇದೆ ತಾನೇ? ಊ, ಹೊರಡು, ಅ.... ಮತ್ತೆ, ಅಲ್ಲಿ ‘ವಾಚ್ಮೆನ್’ ಎಂಬ ಒಂದು ಪ್ರಾಣಿ ಕಾವಲು ಕಾಯ್ತಾ ಕೂತಿರತ್ತೆ ಬಿಲ್ಡಿಂಗ್ ಬಾಗಿಲಲ್ಲೇ– ಅದ್ರ ಅಪ್ಪಣೆ ಇಲ್ದೆ, ಒಂದು ನೊಣ ಕೂಡ ಒಳಗೆ ಹೋಗೋ ಹಾಗಿಲ್ಲ! ಭದ್ರಾ, ಅವನ ಕಣ್ಣಿಗೆ ಬಿದ್ದೀಯೆ, ಹುಷಾರ್!

ನೀನು ವಾಪಸ್ ಬರೋವರೆಗೂ ನಾನಿಲ್ಲೇ ಇರ್ತೀನಿ, ನಾರಾಯಣ, ನಾರಾಯಣ.........“

ಗತ್ತಿನಿಂದ ಹೊರಟ ಯಮ ಧರ್ಮರಾಯ, ಹತ್ತು ನಿಮಿಷಕ್ಕೆಲ್ಲಾ ಸತ್ತೆಯಾ ಬದುಕಿದೆಯಾ ಎಂಬಂತೆ ಓಡೋಡಿ ಬಂದೇ ಬಿಟ್ಟ!

ಪಾಷ ಎಲ್ಲೋ, ಗದೆ ಎಲ್ಲೋ, ಕಿರೀಟ ಎಲ್ಲೋ!

“ಏನಾಯ್ತು ಯಮ ಧರ್ಮರಾಯ! ಏನೀ ಅವಸ್ಥೆ?“ ಎಂದು ಗಾಭರಿಯಿಂದ ನಾರದ ಪ್ರಶ್ನಿಸಿದಾಗ,

“ಅಲ್ಲಿ, ಅಲ್ಲಿ, ಅಲ್ಲಿ ಇರೋ ಜೀವ ಹೆಣ್ಣು!” ತೊದಲಿದನು, ಯಮ.

“ಆದರೇನಂತೆ? ಎಷ್ಟು ಹೆಣ್ಣು ಜೀವಗಳನ್ನು ಇಲ್ಲಿಗೆ ಎಳೆದುಕೊಂಡು ಬಂದಿಲ್ಲ? ಇದೇನು ಮಹಾ ನರಕಾಧಿಪತಿ?” ಎಂದು ನಾರದ ಅವನನ್ನು ತರಾಟೆಗೆ ತೆಗೆದುಕೊಂಡಾಗ,

“ಹೌದು ನಾರದದೇವ, ಆದರೆ, ಆದರೆ, ಅವಳ, ಅವಳ, ಅವಳ ಹೆಸರು ಸಾ ಸಾ...ಸಾವಿತ್ರಿ! ಸಾವಿತ್ರಿ!’ ಕುಸಿದು ಬಿದ್ದನು, ನರಕಾಧಿಪತಿ!

■



# ಎಂಭತ್ತು ಪರ್‌ಸೆಂಟಿಗಾಗಿ

• ಎಚ್. ಶಾಂತರಾಜ ಐತಾಳ

ಕಾಕಾಂಚಲ ರಾಜ್ಯದೊಳಗ ವಿಧಾನಸಭಾ ಚುನಾವಣಾ ಕಿರುಚಾಟ, ಆರ್ಭಟ ಭಾರೀ ಮಸ್ತ್ ಇತ್ತು ತಗೋರಿ. ಯಲ್ಲವ್ವನ ಜಾತ್ರಿ ಒಳಗ ಅದೇನೋ ಅಂತಾರಲ್ರಿ ಹಂಗ ನಡೀತ್ ಬಿಡಿ. ಆದ್ರ ಈ ಚುನಾವಣೆ ಹತ್ರ ಬಂದ್ದಂಗೆಲ್ಲ 'ದಾಸನ ಮಾಡಿಕೋ ಎನ್ನ' ಅಂದ್ಕೋತ ಮಂದಿ ಮುಂದ ಹಿಂದ ಡೊಗ್ಗ ಸಲಾಂ ಹೊಡಿತಿದ್ನಲ್ರೀ ನಾಗ್ಯಾ ಈಗ 'ನೀನ್ಯಾತಕೋ ನಿನ್ನ ಹಂಗ್ಯಾತಕೋ' ಅನ್ನಾಕ ಹತ್ಯಾನ್ರಿ. ಅಂವಾ ಈಗ ನಾಗಪ್ಪಾ ಬುಸ್ಸಪ್ಪನವರ್ ಆಗ್ಯಾನ್ರಿ ಅವ್ವವ್ವನ್ನ ತಂದು.

'ಅಲ್ಲಲೇ ನಾಗ್ಯಾ ಎಂಟನೇ ಕ್ಲಾಸ್ ಫೇಲ್ ಆಸಾಮಿ ನೀನು. ಅದ್ಹೆಂಗೆ ಉನ್ನತ ಶಿಕ್ಷಣ ಸಚಿವ ಸ್ಥಾನ ಗಿಟ್ಟಿಸಿಕೊಂಡು ಬಿಟ್ಯಲೇ? ಹೇಳಾರ ಹೇಳಲ್ಲ' ಅಂತ ನಾನೊಮ್ಮೆ ಹಳೇ ದೋಸ್ತನ್ನ ಕೇಳಿದ್ದೆ. ಅದಕ್ಕಂವ 'ನೋಡಲೇ ಶಾಮಪ್ಪಾ, ನಿನಗೊಂದೂ ತಿಳ್ಯಾಕಿಲ್ಲ ಬಿಡು. ನೀ ನನ್ನ ಇನ್ನ ಮ್ಯಾಗ ನಾಗ್ಯಾ, ಪಾಗ್ಯಾ ಅಂತೆಲ್ಲ ಕರಿಬೇಡ, ತಿಳೀತೂ, ನಾನೀಗ ನಾಗಪ್ಪಾ ಬುಸ್ಸಪ್ಪನವರ್ ಆಗೀನಿ. ನೀ ಏನ ಬಾಜೀರಾಯ ಅದೀ ಏನು ಮತ್ತ? ಸಚಿವ ಸ್ಥಾನ ಅಂದ್ರ ರಗಡ್ ತ್ರಾಸೈತಲೇ. ಆದ್ರಾಗ ಉನ್ನತ ಶಿಕ್ಷಣ ಖಾತೆ ಸಿಕ್ಕೈತಿ, ತಿಳ್ಕಾ ಎಂಬ ಬುದ್ಧಿ ಮಾತು ಬಂತು ಮಾನ್ಯ ಸಚಿವರ ಬಾಯಿಂದ.

ಈ ನಾಗ್ಯಾ ಗಪ್ಪ ಕುಂದ್ರೋ ಪೈಕಿ ಅಲ್ಲ. ಈ ಉನ್ನತ ಶಿಕ್ಷಣ ಸಚಿವ ಸ್ಥಾನ ಸಿಕ್ಕಿದ ಮ್ಯಾಗ ಕಮಾಯಿ ಛಲೋ ಆಗಾಕ ಹತ್ತಿತು. ಕೆತ್ತೆಬಜೆ ಕಾರಬಾರ ಮಾಡಿ ಸಂಬಂಧಿಗಳಿಗೆಲ್ಲ ಅಗ್ದಿ ಟಾಪ್ ಹುದ್ದೆ ಕೊಡಿಸ್ಬಿಟ್ಟ ನೋಡ್ರಿ, ಈ ಎಂಟನೇ ಕ್ಲಾಸ್ ಗ್ರಾಜುವೇಟ್!

ಅಜಮಾಸ್ ಎರಡು ತಿಂಗಳಾದ ಮ್ಯಾಲೆ ಈ ಸಚಿವೋತ್ತಮ ನನಗೇ ಫೋನ್ ಹಚ್ಚಿದ್ದ! 'ನಿಮ್ಮೂರ್ನಾಗ ಒಂದು ಯುನಿವರ್ಸಿಟಿ ಶುರು ಮಾಡಾಕ ಅನುಮತಿ ಕೊಡ್ಸೀನಿ ಕಣಲೇ–ಮಶ್ಯಗಂಧಾ ವಿಶ್ವವಿದ್ಯಾಲಯ ಅಂತ. ಕರಾವಳಿ ಮಂದಿಗೇ ಸಪ್ರೇಟ್ ವಿಶ್ವವಿದ್ಯಾಲಯ ಬೇಕು ಅಂತ ನಾನು ಮಾಡಿದ ಪ್ರಯತ್ನ ಸಫಲಾಯ್ತು ನೋಡಪಾ' ಅಂತ ಮಾನ್ಯ ಸಚಿವರೇ ಉದ್ಗರಿಸಿದರು. ಅಂದ್ರ ಮತ್ಸ್ಯಗಂಧಾ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬರ್ತದ ಅಂತಾಯ್ತಲ್ಲ! ಇನ್ನಿದಕ್ಕ ಗುಮಾಸ್ತರಿಂದ ಹಿಡಿದು ಉಪಕುಲಪತಿವರೆಗೆ ಪೋಸ್ಟಿಂಗ್ ಆಗಬೇಕಲ್ರಿ. ಅಗ್ದಿ ಛಲೋ ಚಾನ್ಸ್ ಹೊಡ್‌ದ ನಾಗ್ಯಾ–ಅಂತ ಮನಸಿನಾಗೇ ಅಂದ್ಕೊಂಡೆ.

ಹಂಗೇ ಆತು ನೋಡ್ರಿ. ಅಕ್ಕನ ಮಗ, ತಂಗೀ ಮಗಳು, ತಮ್ಮನ ಅಳಿಯ, ಅಣ್ಣನ ಮಾವ, ಚಿಗವ್ವನ ಊರಿನಂವ–ಹೀಂಗ ಸಂಬಂಧಿಕರಿಗೆಲ್ಲ ಚಾನ್ಸ್ ಸಿಗ್ತು. ಮೆರಿಟ್ ಐತಿ ಅಂತ ಅಂದವ್ರು ರೊಕ್ಕಾ, ಸುರಿದು ಕೆಲಸ ಪಕ್ಕಾ ಮಾಡ್ಕೊಂಡ್ರು.

ಉಪಕುಲಪತಿ ಸ್ಥಾನ ಹಂಗೇ ಉಳೀತು. ಅದಕ್ಕ ಸಚಿವರ ಬಾಮ್ಯೆದನ್ನೇ ಆರಿಸ್ಬೇಕು ಅಂತ ಅವರ ಹೇಂಡ್ತಿದೇ ಅಪ್ಪಣೆ ಆಗಿತ್ತು. ಅಂದ ಮ್ಯಾಗ ತೀಪು ಈ ಬಾಮ್ಯೆದ ಬರೇ ಮೂರು ಸಲ ಎಂ.ಎ. ಪರೀಕ್ಷಾದಾಗ ಫೇಲ್ ಆಗಿದ್ದ. ಮತ್ತ

ಎಂತೆಂತದೋ ವಶೀಲಿ ಬಾಜಿ ಮಾಡಿ 'ಪ್ರಾಯ್ವೇಟಿ' ಎಂ.ಎ. ಡಿಗ್ರಿ ತನ್ನ ಹೆಸರಿನ ಮುಂದ ಹಚ್ಚಿಕೊಂಡಿದ್ದ ತಗೊರಿ.

ನೋಡಾಕ ಮೈಸೂರು ಮಹಾರಾಜರ ಹಂಗ ಇದ್ದ ಈ ಬಾಮೈದನ್ನ ಹ್ಯಾಂಗ ಸಿಲೆಕ್ಟ ಮಾಡೂದು ಅಂತ ಚಿಂತಿ ಹತ್ತಿತ್ತು ಸಾಹೇಬ್ರಿಗೆ. ಕೊನೀ ಸುತ್ನಾಗ ಯಾರು ಇಂಟರ್‌ವ್ಯೂ ಮಾಡ್ತಾರ–ಅವ್ರಿಗೆ ಸಚಿವರಿಂದ್ಲೇ ಖಡಕ್ ಆದೇಶ ಹೋಯ್ತಂತೆ 'ಅಗ್ದೀ ಸಿಂಪಲ್ ಐದು ಪ್ರಶ್ನೆ ಕೇಳ್ರಿ. ಅದ್ರಾಗ ಉತ್ತರ ಹುಡುಕಾದು ಸೈತಾ ಸಿಂಪಲ್ಲಾಗಿರಬೇಕು. ಇವಾಗ ಒಂದು ಪೆಶಲ್ ಪ್ರಶ್ನಾವಳಿ ಕೊಡಬೇಕು. ಏನಾರ ಮಾಡ್ರಿ. ಎಂಭತ್ತು ಪರ್‌ಸೆಂಟ್ ಮಾರ್ಕ್ ಬರಬೇಕು ನೋಡ್ರಿ ಮತ್ತೆ ಅಂತ.

ಸಚಿವರ ಹುಕುಂ ಆದ್ಮೇಲೆ ತೀಪು. ಈ ಬಾಮೈದಂಗಾಗಿ ಪೆಶಲ್ ಪ್ರಶ್ನಾವಳಿ ತಾಬಡತೋಬ್ ತಯಾರಾಗಿ ಬಿಡ್ತು.

1) ಕಾಕಾಂಚಲ ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಿವೆ?

2) ರಾಜ್ಯದ ಇಪ್ಪತ್ತು ಜಿಲ್ಲೆಗಳ ಪೈಕಿ ಕರಾವಳಿ ಭಾಗದಲ್ಲಿ ಆರಂಭವಾಗಲಿರುವ ವಿಶ್ವವಿದ್ಯಾಲಯದ ಹೆಸರೇನು?

3) ಕರಾವಳಿ ಭಾಗದಲ್ಲಿ ಹೊಸದಾಗಿ ಆರಂಭವಾಗಲಿರುವ ಮತ್ಸ್ಯಗಂಧಾ ವಿಶ್ವವಿದ್ಯಾಲಯದಲ್ಲಿ ಯಾವ ಎರಡು ವಿಶಿಷ್ಟ ವಿಷಯಗಳ ಬಗ್ಗೆ ಉನ್ನತ ಶಿಕ್ಷಣ ನೀಡಲಾಗುವುದು?

4) ಮೀನುಗಾರಿಕೆ ಹಾಗೂ ಕಪ್ಪೆಗಾರಿಕೆ ಎಂಬ ಎರಡು ವಿಶಿಷ್ಟ ವಿಷಯಗಳ ಬಗ್ಗೆ ಉನ್ನತ ಶಿಕ್ಷಣ ನೀಡಲಾಗುವ ಮತ್ಸ್ಯಗಂಧಾ ವಿಶ್ವವಿದ್ಯಾಲಯ ಯಾವ ಸಮುದ್ರ ತೀರದಲ್ಲಿದೆ?

5) ಅರಬೀ ಸಮುದ್ರ ತೀರದಲ್ಲಿರುವ ಮತ್ಸ್ಯಗಂಧಾ ವಿಶ್ವವಿದ್ಯಾಲಯದಲ್ಲಿ ಇತರ ಯಾವ ಸಾಮಾನ್ಯ ವಿಷಯಗಳನ್ನು ಕಲಿಸಲಾಗುವುದು?

ಸಚಿವರ ಬಾಮೈದ ಈ ಪ್ರಶ್ನಾವಳಿಯನ್ನು ನೋಡೇ ನೋಡ್ತಾನೆ–ನೋಡೇ ನೋಡ್ತಾನೆ. ಯಾರಿಗೂ ಸಂಶಯ ಬರಬಾರದು ನೋಡ್ರಿ. ಅದಕ್ಕಾ ಪಕ್ಕದ ತಮಿಳ್ನಾಡಿನಿಂದ ಮೇಲ್ವಿಚಾರಕರು ಬಂದಿದ್ರು. ಹಂಗಾಗಿ ಕೇಳೂ ಹಂಗಿಲ್ಲ. ನೋಡೂ ಹಂಗಿಲ್ಲ.

ಕಡೀಕ್ಕ ಯಾವುದೋ ಪುಸ್ತಕದ ವಳಗ ಹೀಂಗಿದ್ದೇ ಪ್ರಶ್ನಾವಳಿಗೆ ಉತ್ತರ ಬರದಿದ್ದ ಶಾಣ್ಯಾನ ಕತೆ ನೆನಪಾಗಿ ಬಾಮೈದ ಬರದ್ನಂತೆ. ಒಂದನೇ ಪ್ರಶ್ನೆಗೆ ಉತ್ತರ ಎರಡನೇ ಪ್ರಶ್ನೆ ನೋಡ್ರಿ. ಎರಡನೇ ಪ್ರಶ್ನೆಗೆ ಮೂರನೇ ಪ್ರಶ್ನೆ ನೋಡ್ರಿ. ಮೂರನೇ ಪ್ರಶ್ನೆಗೆ ನಾಲ್ಕನೇ ಪ್ರಶ್ನೆ ನೋಡ್ರಿ. ನಾಲ್ಕನೇ ಪ್ರಶ್ನೆಗೆ ಐದನೇ ಪ್ರಶ್ನೆ ನೋಡ್ರಿ. ಆದರ ಐದನೇ ಪ್ರಶ್ನೆಗೆ ಯಾವ್ದೇ ಹಿಂಟ್ ಕಾಣಲಿಲ್ಲ. ಬಿಟ್ಟೇ ಬಿಟ್ನಂತ ನೋಡ್ರೀ.

ಬಿಡವಲ್ಲನ್ಯಾಕ? ಅಲ್ಲಿಗಾತಾಲ್ರಿ ಐದಕ್ಕ ನಾಲ್ಕು ರೈಟ್ ಆತು. ಎಂಬತ್ತು ಪರ್‌ಸೆಂಟು ಮಾರ್ಕ್ ಗ್ಯಾರಂಟೀ ಆತು. ಉನ್ನತ ಶಿಕ್ಷಣ ಸಚಿವ ಮಾನ್ಯ ನಾಗಪ್ಪ ಬುಸ್ಸಪ್ಪನವರ ಕೆಲಸ ಅಗದೀ ಸುರಳೀತ ಆತು!

# ಆಹಾ ಹೈಟೆಕ್ ಆಸ್ಪತ್ರೆ....!

• ಗುಂಡುರಾವ್ ದೇಸಾಯಿ

ನಾನು ಊರಾಗ ಯಾವುದೋ ಕೆಲಸದಾಗ ಇದ್ದಾಗ ಧಾರವಾಡದಿಂದ ಮಗಳನ್ನ ಮೆಟ್ರಿಕಿ ಕೋಚಿಂಗ್ ಬಿಟ್ಟ ಟುಟೋರಿಯಲ್ಸನಿಂದ ಫೋನ್ ಬಂತು. 'ಸರ್ ನಿಮ್ಮ ಮಗಳು ಅನ್ ಕಾಷಿಯಸ್ ಆಗಿ ಬಿದ್ದ ಬಿಟ್ಟಾಳ. ಎದ್ದೇಳತಾ ಇಲ್ಲ' ಅಂತ ಗಾಭರಿಯಿಂದ ಹೇಳಿದ್ರು. ನಾನು 'ಇಲ್ಲ ಧಾರವಾಡದಲ್ಲೆ ನನ್ನ ಅಕ್ಕನ ಮನೆಯಿದೆ, ನಾನು 300 ಕಿ.ಮೀ ದೂರ ಇದ್ದೀನಿ ಅವರಿಗೆ ಹೇಳತಿನಿ ನೀವು ಆಸ್ಪತ್ರೆಗೆ ಕರದೊಯ್ಯಿರಿ' ಅಂದೆ. ಇನ್ನೂ ಹತ್ತು ನಿಮಿಷದಲ್ಲಿ ಬಂದ ಫೋನ 'ಇನ್ನೂ ಏಳತಾ ಇಲ್ಲ ಸರ್, ತಡಮಾಡಬೇಡಿ ಬೇಗ ಬನ್ನಿ ಇಲ್ಲ ಕಳಿಸಿ' ಅಂದಾಗ ಗಾಬರಿ ಆಯ್ತು. ಅಕ್ಕ ಮಾಮಗ ಬೇಗ ಹೋಗಲಿಕ್ಕೆ ಹೇಳಿದೆ.

ಅವರ ಮೇಷ್ಟ್ರು ಸಮೀಪದ ಆಸ್ಪತ್ರೆಗೆ ಹೋಗಿ ಅಲ್ಲಿಯ ವೈದ್ಯರಿಗೆ ಇದ್ದ ಪರಿಸ್ಥಿತಿ ಹೇಳಿದ್ರ ತಾವು ಬರೋದು ಬ್ಯಾಡ ನರ್ಸನ ಕಳಸಕ್ಕೂ ರೆಡಿ ಇರಲಿಲ್ಲ. ಪೇಷಂಟನ್ ಇಲ್ಲೆ ಕರಕೊಂಡು ಬರಬೇಕು ಎಂದು ಆಜ್ಞಾಪಿಸಿದರಂತೆ. ಹಾಗೂ ಹೀಗೂ ಮೂರಂತಸ್ತ ಕಟ್ಟಡದಿಂದ ಇಳಿಸಿ ಕರಕಂಡು ಹೋದ್ರೆ ಆ ವೈದ್ಯ ಮಹಾಶಯರು 'ಹಾಂ! ಇಪ್ಪತ್ತು ನಿಮಿಷ ಬಿದ್ದಿದ್ಲಾ? ಸಿರಿಯಸ್ ಕೇಸ್ ದೊಡ್ಡ ಆಸ್ಪತ್ರೆಗೆ ಕರೊಂಡು ಹೋಗಿ' ಎಂದು ರೆಫರ್ ಮಾಡಿದ್ರು. ಅಷ್ಟರಲ್ಲಿ ಎಚ್ಚರ ಬಂದು ಅರಾಮದ ಪೇಷಂಟನ್ನು ಪರೀಕ್ಷಿಸದೆ. ಅದರಲ್ಲಿ ಅವರ ಗೆಳತಿ ನಮ್ಮೂರ ಶಾಲ್ಯಾಗನೂ ಒಂದೆರಡು ಸಲ ಹಿಂಗಾ ಬಿದ್ದದಳು ಅಂದಾಗ. ಅಷ್ಟರಲ್ಲೆ ಆಸ್ಪತ್ರೆಗೆ ಧಾವಿಸಿ ಅಲ್ಲೆ ಇದ್ದ ಇಕಿನ "ಹೌದು ಹಿಂಗಾದಾಗ ಇವರಪ್ಪ ಅಲ್ಲೇ ಲೋಕಲ್ ಡಾಕಟ್ರಗ ತೋರಸ್ತಾರ, ನೀವರ ಕಾಳಜಿ ಮಾಡ್ರಿ ಅಣ್ಣಾ' ಅಂದಾಗ ಮಾಮ ಸೀದಾ ಮಲ್ಟಿ ಸ್ಪೇಷಾಲಿಟಿ ಆಸ್ಪತ್ರಗೆ ಕರಕೊಂಡು ಹೋಗ್ಯಾರ.

ನಾನು ಕೂತಲ್ಲೆ ವಿಚಾರಿಸಿದೆ, ಡಾಕ್ಟರನ್ನು ಸಂಪರ್ಕಿಸಿದೆ. ಹಾರ್ಮೋನ್ ಇಂಬ್ಯಾಲೆನ್ಸಿನಿಂದ ಹೀಗಾಗುತ್ತೆ ಎಂದು ವೈದ್ಯ ಮಿತ್ರರು ಸಲಹೆ ನೀಡಿದ್ರು. ಆದರ ಅಕ್ಕ ಮಾಮಾ ಭಯದಲ್ಲಿ ಮಗಳನ್ನ ದೊಡ್ಡ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅವರೂ ಎಮರ್ಜೆನ್ಸಿ ಕೇಸು ಅಂತ ಬುಕ್ಕ ಮಾಡಿಕೊಂಡು ಇಷ್ಟು ಸಾವಿರ ಆಗುತ್ತಾರ ಎಂದಿದ್ದಾರೆ. ಪರಿಸ್ಥಿತಿ ಅರಿತು ಹೋರರೋಗಿ ಅಂತ ಬರಸರಿ ಅಂತ ಹೇಳಿದೆ. ಆದರೂ ದೊಡ್ಡ ಆಸ್ಪತ್ರೆಗಳು ಅಂದ್ರೆ ರೋಗಿಗಳ ರಕ್ತ ಹೀರ ತಗಣಿ ಹಾಂಗ ಬೆಳದಿರುವಂತಹವು. ಅಲ್ಲಿ ಎಂಟ್ರಿಯಾದೊಡನೆ 'ಹಾಂ! ಮೂರ್ಛೆ ಕೇಸಾ ಆ ಎಮರ್ಜೆನ್ಸಿ ವಾರ್ಡಗೆ ಶಿಫ್ಟ ಮಾಡೋಣ ಇಷ್ಟಾಗುತ್ತೆ ಇಷ್ಟು ರೊಕ್ಕ ಕಟ್ಟಿ ಬನ್ನಿ' ಎಂದು ಸಲಹೆ ನೀಡಿದ್ದಾರೆ. ಮಾಮಾ ಫೋನ ಮಾಡಿದ್ರು 'ಮಗಳು ಹೇಗಿದ್ದಾಳೆ?' ಎಂದೆ 'ನಾರ್ಮಲ್ ಆಗಿದ್ದಾಳೆ' ಎಂದ್ರು. ಹಾಗಿದ್ರೆ ಹೊರ ರೋಗಿ ಎಂದೆ ನಮೂದಿಸಿ ಎಂದೆ. ಹಾಗೆ ಮಾಡಿದ್ರು. ಅಲ್ಲಿ ನರರೋಗ ತಜ್ಞರ ಹತ್ತಿರ ಕರೆದೊಯ್ಯಿದಿದ್ದಾರೆ. ಅವರು ಕೇಸ್ ಸ್ಟಡಿ ಮಾಡಿ 'ಓ! ಇಪ್ಪತ್ತು ನಿಮಿಷ ಅನ್‌ಕಾನ್ಷಿಯಸ್ಸಾ. ಇಟ ಈಜ್ ಹಾರಿಬಲ್!' ಐದು ಟೆಸ್ಟು ಬರುಕೊಟ್ಟು ಇವನ್ನೆಲ್ಲಾ ಚೆಕ್ ಮಾಡಿಸಿಕೊಂಡು ಬರ್ರಿ ಅಂದ್ರು. ಬಿ.ಪಿ. ಶುಗರು. ಇ.ಸಿ.ಜಿ. ಸಿಸಿಜಿ ಎಲ್ಲವೂ ಮಾಡಿಸುವಷ್ಟರಲ್ಲಿ ಎಂಟು ಸಾವಿರ ರೂಪಾಯಿ ಖರ್ಚಾಗಿವೆ.

ನನಗ ಫೋನ ಮಾಡಿದ್ರು. ಇನ್ನೂ ಎಮ್.ಆರ್.ಐ ಸ್ಕ್ಯಾನ್ ಮಾಡಿಸಬೇಕಿದೆ. ಎಮರ್ಜೆನ್ಸಿ ಮಾಡಸಬೇಕಂದ್ರೆ ಇಷ್ಟಂತೆ, ಪಾಳಿ ಮೇಲಂದ್ರೆ ಏಳು ಸಾವಿರ ರೂಪಾಯಿಯಂತೆ ಅಂದ್ರು. ಇಲ್ಲಾ ನಾನು ಬಂದು ಮಾಡಿಸುತ್ತೇನೆ. ನೀವು ಮನೆಗೆ ಹೋಗಿ ಎಂದೆ.

ಎರಡು ದಿನ ನಂತರ ಊರಿಗೆ ಹೋದೆ ಮಗಳನ್ನು ನೋಡಿದೆ. ಆರೋಗ್ಯವಾಗಿಯೇ ಇದ್ದಳು. ಇನ್ನೊಂದು ದಿನ ಗಮನಿಸಿದೆ ಆಗಲೂ ಆರಾಮ ಇದ್ದಳು. ಕೌನ್ಸಲಿಂಗ ಮಾಡಿದೆ ಯಾವುದೆ ವ್ಯತ್ಯಾಸ ಕಾಣಲಿಲ್ಲ. ಕೋಚಿಂಗ್ ಕ್ಲಾಸಗೆ ಊಟ ಸೇವಿಸದೆ ಹಾಗೆ ಹೋಗುತ್ತಿದ್ದುದರಿಂದ ಹಾಗೂ ಮಿತ್ರ ವೈದ್ಯರು ಹೇಳಿದಂತೆ ಹಾರ್ಮೋನ ಇಂಬ್ಯಾಲೆನ್ಸನಿಂದ ಆಗುತ್ತಿದೆ ಎಂದೆನಿಸಿತು. ಎಂ.ಆರ್.ಐ ಸ್ಕಾನ್ ಮಾಡಿಸಲೇಬೇಕಾದ ದಿನ ಬಂತು. ಈಕೆಗೂ ಆತಂಕ ಅದೊಂದು ಮಾಡಿಸಿ ಬಿಟ್ರೆ ಪರಿಹಾರ ಆಗುತ್ತಂತ. ನಾನು ಒಪ್ಪುವ ಸ್ಥಿತಿ ಇರಲಿಲ್ಲ. ಅಕ್ಕನ ಮೂಲಕ ಪ್ರೇಶರ್ ತಂದ್ಲೂ. ಹೆಣ್ಣುಹುಡುಗಿ ವಿಷಯ ಅಲಕ್ಷ ಮಾಡಬಾರದು ಅಂತ ಉಗದ್ರು. ಆಯ್ತು ಎಂ.ಆರ್.ಐ ಸ್ಕ್ಯಾನ ಮಾಡಸಾಕ ಹೊಂಟ್ವಿ. ಡಾಕ್ಟರ್ನು ಭೇಟಿಯಾದಿವಿ. ಆರಾಮಾಗಿಯೆ ಇದ್ದ ಮಗಳಿಗೆ ಇದು ಅವಶ್ಯಕತೆ ಇಲ್ಲ ಅಂತ ಹೇಳಲಿಕ್ಕೆ ಮನಸು ಮಾಡಲೆ ಇಲ್ಲ. ಎಂ.ಆರ್.ಐ ಎನ್ನುವ ಭ್ರಮೆ ಹುಟ್ಟಿಸುವ ಕೋಣೆಯೊಳಗೆ ಪ್ರವೇಶ ಪಡದಿವಿ. ಆಸ್ಪತ್ರೆಯವರ ಲಾಜಿಕ್ಕು ಅಂದ್ರೆ ಅಲ್ಲಿರುವ ಸಿಸ್ಟಮ್ ನೋಡಿಯೇ ರೊಕ್ಕದ ಬಗ್ಗೆ ವ್ಯಥೆ ಪಟ್ಟಿರಬಾರದು ಅಂತಹ ವಾತಾವರಣ ಸೃಷ್ಟಿ ಮಾಡಿರತಾರೆ. ಲೋಕಲ್ ಆಸ್ಪತ್ರೆಗಳಲ್ಲಿ ಕಾಣದ ಇಂದ್ರಪ್ರಸ್ಥದ ವೈಭೋಗವನ್ನು ಸೃಷ್ಟಿಸಿರುವ ವೈದ್ಯಕೀಯ ಉದ್ಯಮದ ತಂತ್ರಕ್ಕೆ ಅಬ್ಬಾ ಎಂದು ಉದ್ಗರಿಸಿ ಬಿದ್ದ ಕುರಿಗಳು ನಾವಾಗಿರುವಾಗ ಸಾಲಾದ್ರೂ ಚಿಂತಿಲ್ಲ ಗುಣಪಡಿಸಿಕೊಳ್ಳಬೇಕು ಎನ್ನುವ ಆಶಾವಾದ ಅಲ್ಲಿನ ಪರಿಸ್ಥಿತಿ ಹುಟ್ಟಿಸುವುದು ಸುಮ್ಮನಲ್ಲ. ನಾನು ಅಂತಹ ಭ್ರಮೆಗೆ ಒಳಗಾಗಿದ್ದೂ ಸುಳ್ಳಲ್ಲ. ಕಾಂತೀಯ ಕ್ಷೇತ್ರಕ್ಕೆ ಒಳಪಟ್ಟಿದೆ ಎನ್ನು ಬೋರ್ಡ ರೋಗಿಯ ಹಿಂದುಗಡೆ ಹೋಗುವವರು ಕಬ್ಬಿಣದ ವಸ್ತುಗಳನ್ನು ದೇಹದಲ್ಲಿ ಅಳವಡಿಸಿಕೊಂಡಿರಬಾರದು ಎನ್ನುವ ಸೂಚನೆ. ಎಲ್ಲವನ್ನು ಕಳಚಿ ಹೊರಕ್ಕೆ ಇಟ್ಟು ಮಗಳೊಂದಿಗೆ ಹೋದೆ. ಅರ್ಧ ದೇಹವನ್ನು ಯಂತ್ರದೊಳಗೆ ಹೋಗಿಸಿ ಸ್ಕ್ಯಾನ ಮಾಡಬೇಕಾದ ದೇಹವನ್ನು ಇಂಚಿಂಚೂ ಬಿಡದೆ ಸ್ಕ್ಯಾನ ಮಾಡುವ, ಅದರ ವಿವರಗಳೆಲ್ಲವೂ ಪಕ್ಕದ ರೂಮಿನ ಗಣಕಯಂತ್ರದಲ್ಲಿ ದಾಖಲು ಮಾಡುವ ತಜ್ಞ ವೈದ್ಯರು. ಅದೊಂದು ವಿಶಿಷ್ಟ ಲೋಕನ ಸರಿ.

ಆಯ್ತು ಎಲ್ಲಾ ಮುಗಿದ ಮೇಲೆ ತಾಸು ಬಿಟ್ಟು ವೈದ್ಯರನ್ನು ಭೇಟಿಯಾಗಿ ಎಂದು ಅಲ್ಲಿಯ ತಜ್ಞರು ಸೂಚಿಸಿದರು. ರಿಪೋರ್ಟ ಎಂದಾಗ ನಿಮಗೆ ಬೈ ಹ್ಯಾಂಡ ಅಂದ್ರೆ ಎರಡು ದಿನ ಆಗುತ್ತೆ ನೀವು ವೈದ್ಯರನ್ನು ಸಂಪರ್ಕಿಸಿ ಅವರಿಗೆ ಆನ್ ಲೈನನಲ್ಲಿ ಎಲ್ಲಾ ಮಾಹಿತಿ ರವಾನಿಸುತ್ತೇವೆ ಎಂದರು. ಅವರ ಸೂಚನೆಯಂತೆ ಭೇಟಿಗೆ ಹೋಗಬೇಕಾಯಿತು. ಅಲ್ಲಿ ಮತ್ತೊಮ್ಮೆ ನೊಂದಣಿ. ನೊಂದಣಿಗೆ ಪ್ರತ್ಯೇಕ ಶುಲ್ಕ ಜೊತೆಗೆ ವೈದ್ಯರು ಇಲ್ಲ ಎನ್ನುವ ಮಾತು. ನಾವು ಮೂನ್ನೂರು ಕಿಲೋ ಮೀಟರ್ ದೂರದಿಂದ ಬಂದಿದ್ದೇನೆ. ರಜೆ ಇಲ್ಲ. ನಾಳೆ ಹೋಗಲೇಬೇಕಾಗಿದೆ, ಹಾಗೆ ಹೀಗೆ ಎಂದು ಸಿಕ್ಕಾಪಟ್ಟೆ ಜರಿದಾಗ ಇಲ್ಲ ಎನ್ನುವ ವೈದ್ಯರು ಆ ರೂಮಿನಲ್ಲಿ ಹೇಗೆ ಪ್ರತ್ಯಕ್ಷರಾದರೋ ಗೊತ್ತಿಲ್ಲ. ಅವರನ್ನು ಭೇಟಿಯಾದ್ವಿ. ಅವರು ಯಾವ ಊರು

ಯಾವ ಜಿಲ್ಲೆ ವಿಚಾರಿಸಿ 'ಪಾಪ ಮಕ್ಕಳಿಗೆ ಕೋಚಿಂಗ್ ಅಂತ ಹೇಳಿ ಯಾಕೆ ಕಾಟಕೊಡ್ತಿರಾ?' ಅಂದ್ರು. ಕೊಟ್ಟಿಲ್ಲ ಸರ್ ಸಾಧ್ಯವಾದಷ್ಟು ಓದು ಎಂದಿದ್ದೇವೆ ಎಂದು ಹೇಳಿ ರಿಪೋರ್ಟರ್ ಬಗ್ಗೆ ತಿಳಿಸಲು ಹೇಳಿದೆ. ಅಲ್ಲೆ ಇದ್ದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಅದರ ಬಗ್ಗೆ ವಿವರಣೆ ನೀಡುತ್ತಾ ನಮಗೂ 'ಡೋಂಟ್ ವರಿ, ನಿಮ್ಮ ಮಗಳ ಮೆದುಳಿನಲ್ಲಿ ಏನೂ ಆಗಿಲ್ಲ, ಸೀ ಈಜ್ ಪರಫೆಕ್ಟಲಿ ಆಲ್ ರೈಟ್' ಅಂದ್ರು. 'ಮತ್ತ್ಯಾಕ ಮೂರ್ಛೆ ಹೋದಳು ಸರ್' ಎಂದೆ 'ಇಲ್ಲ ಹಾರ್ಮೋನ ಇಂಬ್ಯಾಲೆನ್ಸ ಆಗಿ ಹಾಗಾಗಿರುತ್ತದೆ, ಡೋಂಟ್ ವರಿ ಮೆಡಿಸಿನ್ ಅವಶ್ಯಕತೆ ಇಲ್ಲ ನಿಮ್ಮ ಸಮಾಧಾನಕ್ಕ ಈ ಮಾತ್ರೆ ತಗೆದುಕೊಳ್ಳಿ' ಎಂದು ಸಾವಿರ ರೂಪಾಯಿ ಮೊತ್ತದ ಮಾತ್ರೆ ಬರಕೊಟ್ಟರು. 'ಅಲ್ರೀ ಮೊದಲೆ ಹೇಳಬೇಕಲ್ರೀ ಇಷ್ಟೆಲ್ಲ ಟೆಸ್ಟು ಬೇಕಿತ್ತಾ?' ಎಂದೆ. ಎಲ್ಲನೂ ಸಲೀಸಾಗಿ ಇಲಾಜ ಮಾಡಗಿಂದ್ರೆ ನಾವು ಲಕ್ಷಗಟ್ಟಲೆ ಹಣ ಸುರಿದು ಓದಿದ್ದು ಯಾವ ಪುರುಷಾರ್ಥಕ್ಕೆ? ಈ ಮಟ್ಟಿಗೆ ಆಸ್ಪತ್ರೆ ಬೆಳೆಸೋದು, ಮೆಂಟೇನು ಮಾಡೋಕೆ ಆಗುತ್ತೇನ್ರಿ ಎಂದ್ರು?

ನಾನು ಮರುಮಾತನಾಡದೆ ಹೊರಬರಲೇಬೇಕಾಯಿತು.

## ಗಾಂಧೀಜಿ ಮತ್ತು ಮೂರು ಮಂಗಗಳು

ಗಾಂಧೀಜಿ ಬೆಳಗಿನ ವಿಹಾರಕ್ಕೆ ಹೋದಾಗ ಅವರಿಗೆ ತಮ್ಮ ಪ್ರೀತಿಯ 3 ಮಂಗಗಳ ನೆನಪು ಆಯಿತು. ವರುಷಗಳೇ ಕಳೆದು ಹೋಗಿದ್ದರಿಂದ, ಆ ಮಂಗಗಳ ಸ್ಥಿತಿಗತಿ ವಿಚಾರಿಸುವ ಯೋಚನೆ ಬಂದಿತು. ಸ್ವರ್ಗದಲ್ಲಿಯ ದೇವೇಂದ್ರನ ಹತ್ತಿರ ಹೋಗಿ ದೇವಾ ನನ್ನ ಪ್ರೀತಿಯ ಮಂಗಗಳು ಏನು ಮಾಡುತ್ತಿವೆ? ಯಾವ ಪರಿಸ್ಥಿತಿಯಲ್ಲಿ ಹೇಗೆ ಜೀವನ ನಡೆಸುತ್ತಿವೆ, ನಿಮ್ಮ ದಿವ್ಯ ದೃಷ್ಟಿಯಿಂದ ನೋಡಿ ನನಗೆ ತಿಳಿಸುವ ಕೃಪೆ ಮಾಡಬೇಕು ಎಂದು ಪ್ರಾರ್ಥಿಸಿದರು.

ದೇವೇಂದ್ರ ಭಾರತದ ಕಡೆಗೆ ತಮ್ಮ ದಿವ್ಯ ದೃಷ್ಟಿಯಿಂದ ನೋಡಿ, ಗಾಂಧೀಜಿ ಕಣ್ಣು ಮುಚ್ಚಿಕೊಂಡ ಕೋತಿ ನ್ಯಾಯಾಲಯ ಸೇರಿದೆ, ಕಿವಿ ಮುಚ್ಚಿಕೊಂಡ ಕೋತಿ ಅಧಿಕಾರ ಚಲಾಯಿಸುತ್ತಿದೆ ಮತ್ತು ಬಾಯಿ ಮುಚ್ಚಿಕೊಂಡ ಕೋತಿ ಭವ್ಯಭಾರತದ ಮಹಾನಪ್ರಜೆಯಾಗಿ 5 ವರುಷಕ್ಕೆ ಒಮ್ಮೆ ಮಾತ್ರ ಎಚ್ಚರಗೊಂಡು ಮತ್ತೆ ತೂಕಡಿಸುತ್ತಿದೆ. ಇದು ನಿಮ್ಮ ಭಾರತದ ಇವತ್ತಿನ ಪರಿಸ್ಥಿತಿ ಎಂದರು.

ಒಂದು ಕ್ಷಣ ಬಾಪೂಜಿ ಯೋಚಿಸಿದರು, ಕೈಯಲ್ಲಿಯಿದ್ದ ಕೋಲನ್ನು ಬಿಸಾಕಿದರು ಮತ್ತು ದೇವೇಂದ್ರ ಪರಿಸ್ಥಿತಿ ಸುಧಾರಿಸ ಬೇಕಾದರೆ ಈ ಕೋಲಿನಿಂದ ಆಗದು ಕೆಲಸ. ನನಗೆ ಒಂದು ಎಕೆ 47 ರೈಫಲ್ಕೊಡು ನಾನು ಪ್ರಾರಂಭಿಸಿದ ಕೆಲಸ ನಾನೇ ಮುಗಿಸುತ್ತೇನೆ ಎಂದರು. ಅವರ ಧ್ವನಿಯಲ್ಲಿ ಕಠೋರತೆ ಇತ್ತು.

**– ಶ್ರೀಪಾದ ಪುರಾಣಿಕ್**

# ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್

(ಒಂದು ಅಣಕು ಪ್ರಹಸನ)

• **ಅನಾಮಧೇಯ**

ಮಾಹಿತಿ ತಂತ್ರಜ್ಞಾನಕ್ಕೆ ಹೆಸರಾಂತ ಒಂದು ಪ್ರಸಿದ್ಧ ನಗರ. ಅಲ್ಲೊಂದು ಶ್ರೀಮಂತ ಬಡಾವಣೆ. ಅಲ್ಲಿ ಹತ್ತು ಅಂತಸ್ತಿನ ಭವ್ಯ ಕಟ್ಟಡ. ಅದರ ಸುತ್ತ-ಮುತ್ತ ಹಚ್ಚ ಹಸುರಿನ ಹುಲ್ಲಿನ ಮೈದಾನ. ನಾನಾ ಜಾತಿಯ ವಿದೇಶಿ ಗಿಡಮರಗಳು. ಕಟ್ಟಡದ ಭವ್ಯತೆ ವಿಶಾಲತೆಯನ್ನು ಕಣ್ತುಂಬ ನೋಡಬೇಕೆಂದರೆ ಅದರ ಸುತ್ತ-ಮುತ್ತ ಅರ್ಧ ಕಿಲೋಮೀಟರ್ ಸುತ್ತು ಹಾಕಬೇಕು. ವಾಹನ ನಿಲುಗಡೆಗೆ ಪ್ರತ್ಯೇಕ ಸ್ಥಳ. ಅದಕ್ಕೆ ಸೆಕ್ಯೂರಿಟಿ ಗಾರ್ಡ್. ಎಷ್ಟಾದರೂ ಅದು ''ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್'' ಅಲ್ಲವೆ! ಬಡವರಿಗೆ ಮೀಸಲಾದ ಸರಕಾರಿ ಆಸ್ಪತ್ರೆಯಲ್ಲ.

ಮೇಲೆ ಬಣ್ಣಿಸಿದ ಆಸ್ಪತ್ರೆಯೊಳಗೆ ಪಿತೃ ಪಕ್ಷದ ಅಮಾವಾಸ್ಯೆಯಂದು ಮಧ್ಯಮವರ್ಗದ ನಡು ವಯಸ್ಸಿನ ರೋಗಿಯೊಬ್ಬ ಚಿಕಿತ್ಸೆಗಾಗಿ ಹೋದ. ವಿಶಾಲವಾದ ಗಾಜಿನ ಬಾಗಿಲು ಈ ರೋಗಿ ಹೋಗುತ್ತಲೇ ತನಗೆ ತಾನೆ ತೆರೆದು ಕೊಂಡಿತು. ''ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್‌ಗೆ ಸ್ವಾಗತ, ಸುಸ್ವಾಗತ'' ಎಂಬ ಧ್ವನಿ ಮುದ್ರಿತ ಧ್ವನಿ ಆತನನ್ನು ಸ್ವಾಗತಿಸಿತು. ಒಳಗೆ ನೋಡಿದರೆ ಜನರ ಗುಂಪೋ, ಗುಂಪು. ಫಳ-ಫಳ ಹೊಳೆಯುವ ಆಸನಗಳು. ವಿಶಾಲ ಹಾಲಿನ ಮಧ್ಯೆ ಕರಿ ಶಿಲೆಯಲ್ಲಿ ಕೆತ್ತಿದ ಶಿವನ ಭವ್ಯ ವಿಗ್ರಹ. ತಣ್ಣನೆ ಸುವಾಸನಾ ಭರಿತ ಗಾಳಿ. ಗೋಡೆಯ ಮೇಲೆ ನಾನಾ ಬಣ್ಣಗಳ ಚಿತ್ರ-ವಿಚಿತ್ರ ಚಿತ್ತಾರಗಳು. ರೋಗಿ ಬೆರಗುಗಣ್ಣಿನಿಂದ ಎಲ್ಲವನ್ನೂ ನೋಡುತ್ತಾ ಹೋದ. ಇಂಗ್ಲೀಷಿನ ಸೂಚನಾ ಫಲಕಗಳು, ಕೊಠಡಿಗಳ ಮುಂದೆ ಸಾಲಾಗಿ ನಿಂತು ತಮ್ಮ ಸರದಿಗಾಗಿ ಬಕಪಕ್ಷಿಗಳಂತೆ ಕಾಯುತ್ತಿರುವ ರೋಗಿಗಳ ಹಿಂಡು. ಸಮವಸ್ತ್ರ ಧರಿಸಿ ಚಿಕ-ಚಕ ಓಡಾಡುತ್ತಿರುವ ಪುರುಷ-ಮಹಿಳಾ ನರ್ಸುಗಳು, ಮೇಲೆ ಹೋಗಿ ಬರಲು ಲಿಫ್ಟ್‌ಗಳು, ಹತ್ತಿ ಇಳಿಯುವ ರೋಗಿಗಳು. ಈ ರೋಗಿಯೋ ಈ ಎಲ್ಲವನ್ನೂ ಕಕ್ಕಾಬಿಕ್ಕಿಯಾಗಿ ನೋಡುತ್ತಾ 5ನೇ ಅಂತಸ್ತಿನವರೆಗೂ ಹೋದ. ಎಲ್ಲ ಅಂತಸ್ತುಗಳಲ್ಲಿ ರೋಗಿಗಳ, ಅವರ ಆಪ್ತೇಷ್ಟರ ಗುಂಪು. ಆದರೆ ಅವನ ಕಣ್ಣಿಗೆ ಯಾವ ಡಾಕ್ಟರೂ ಕಾಣಿಸಲಿಲ್ಲ. ಸುಸ್ತಾಗಿ ಸ್ವಲ್ಪ ಹೊತ್ತು ಖಾಲಿ ಇದ್ದ ಕುರ್ಚಿಯ ಮೇಲೆ ಕುಳಿತ. ಈತನನ್ನು ಕ್ಯಾರೆ ಎಂದು ಕೇಳುವವರೂ ಯಾರೂ ಇರಲಿಲ್ಲ. ಅಲ್ಲೇ ವೇಗವಾಗಿ ಹೋಗುತ್ತಿದ್ದ ನರ್ಸ್ ಒಬ್ಬಳನ್ನು ಕರೆದು ಕೇಳಿದ - ''ಡಾಕ್ಟರನ್ನು ಕಾಣಬೇಕಿದೆ, ಎಲ್ಲಿಗೆ ಹೋಗಬೇಕು?''. ಆಕೆ ಹೇಳಿದಳು - 'ಫಸ್ಟ್ ಫ್ಲೋರ್, ರಿಸೆಪ್ಶನ್ ಕೌಂಟರ್'ಗೆ ಹೋಗಿ. ಬಡಪಾಯಿ ರೋಗಿ ಕೆಳಗಿಳಿದು ಬಂದು ಸ್ವಾಗತಕಾರರ ಕೊಠಡಿಯೊಳಗೆ ನುಗ್ಗಿದ.

ಆ ಕೊಠಡಿಯ ವೈಭವವೋ ಹೇಳಲಾಗದು! ವಿದೇಶಿ ಸೆಂಟ್‌ನ ಸುವಾಸನೆ ಇವನ ಮೂಗಿಗೆ ಬಡಿಯಿತು. ಹೂವಿನ ಕರಂಡಕಗಳಲ್ಲಿ ಒಪ್ಪ-ಓರಣವಾಗಿ ಅಲಂಕರಿಸಿದ ನಿರ್ಗಂಧ ಕುಸುಮಗಳು. ಭಾರಿ ಟೇಬಲ್‌ಗಳ ಮುಂದೆ ಇರಿಸಿದ ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು, ಆ ಕೌಂಟರ್‌ನಲ್ಲಿ 4-5 ಮಂದಿ ಸ್ವಾಗತಕಾರಿಣಿಗಳು ಮುಂದೆ 'ಮೇ ಐ ಹೆಲ್ಪ್ ಯು?' ಬೋರ್ಡ್. ತಮ್ಮ ಸರದಿಗಾಗಿ ರಿಜಿಸ್ಟರ್ ಮಾಡಿಸಲು ನಿಂತಿರುವ ರೋಗಿಗಳು. ಮಧ್ಯ

ವಯಸ್ಸಿನ ಈ ರೋಗಿಯೂ ಸರದಿಗಾಗಿ ಕಾಯುತ್ತಾ ನಿಂತ. ಸರದಿ ಬರುತ್ತಲೇ ಈ ರೋಗಿ ಒಬ್ಬನಗು ಮುಖದ ಸ್ವಾಗತಕಾರಿಣಿಯ ಮುಂದೆ ಹೋಗಿ ನಿಂತ ಅವಳು ಕೃತಕವಾಗಿ ನಗುತ್ತಾ, ಆತ್ಮೀಯತೆಯಿಂದ ರೋಗಿಯನ್ನು ಕೇಳಿದಳು. ಅವರಿಬ್ಬರ ಮಧ್ಯೆ ನಡೆದ ಸಂಭಾಷಣೆ ಮುಂದಿನಂತಿತ್ತು.

ಸ್ವಾಗತಕಾರಣಿ:- ಹೇಳಿ, ನಮ್ಮ ''ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್''ನಿಂದ ನಿಮಗೆ ಯಾವ ವಿಧದ ಸೇವೆ ಬೇಕಾಗಿದೆ?

ರೋಗಿ:- ನಾನು ಅರ್ಜೆಂಟಾಗಿ ಡಾಕ್ಟರನ್ನು ಕಾಣಬೇಕಿದೆ.

ಸ್ವಾ:- ಯಾವ ಡಾಕ್ಟರನ್ನು? ನಮ್ಮಲ್ಲಿ ಎಲ್ಲ ರೋಗಗಳಿಗೂ, ರೋಗಿಯ ಪ್ರತಿ ಅಂಗಾಂಗಕ್ಕೂ ಚಿಕಿತ್ಸೆ ನೀಡುವ ವೈದ್ಯರ ದೊಡ್ಡ ತಂಡವೇ ಇದೆ. ಬಹಳಷ್ಟು ಮಂದಿ ಫಾರಿನ್‌ನಲ್ಲಿ ಓದಿ ಬಂದವರೇ. ಎಷ್ಟಾದರೂ ನಮ್ಮದು ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ - ಅಲ್ಲವೆ? ಈಗ ಹೇಳಿ, ಯಾವ ತಜ್ಞರನ್ನು ಕಾಣಬೇಕಿದೆ?

ರೋಗಿ:- ಯಾವ ತರಹ ವೈದ್ಯರನ್ನು ಕಾಣಬೇಕೆಂದು ಹೇಗೆ ಹೇಳಲಿ?

ಸ್ವಾ:- ನಿಮಗೆ ಅಂಟಿರುವುದು ಎಂತಹ ರೋಗ? ಎಷ್ಟು ದಿನದಿಂದ?

ರೋ:- ಅದನ್ನು ಕೇಳಲೆಂದೇ ಇಲ್ಲಿಗೆ ಬಂದಿರುವುದು.

ಸ್ವಾ:- ಹಾಗಾದರೆ, ನೀವು ಮೊದಲು ಫಿಸಿಷಿಯನ್ ಡಾಕ್ಟರನ್ನು ಭೇಟಿ ಮಾಡಿ ಮಾತಾಡಿ. ಅವರು ನಿಮಗೆ ಅಮರಿಕೊಂಡಿರುವ ರೋಗ ಯಾವುದೆಂದು ಪತ್ತೆ ಹಚ್ಚಿ ಹೇಳುತ್ತಾರೆ.

ರೋಗಿ:- ಅವರು ಈಗ ಎಲ್ಲಿರುತ್ತಾರೆ?

ಸ್ವಾ:- ಅವರು ಹತ್ತನೇ ಅಂತಸ್ತಿನ ರೂಮ್ ನಂಬರ್ 111ರಲ್ಲಿ ಇರುತ್ತಾರೆ.

ರೋಗಿ:- ಈಗ ನಾನು ಅಲ್ಲಿಗೆ ಹೋಗಬಹುದೋ?

ಸ್ವಾ:- ಇಲ್ಲ, ನೀವು ಮೊದಲು ನಿಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿ ಕಾಯಬೇಕು. ಮ್ಯಾನೇಜ್‌ಮೆಂಟ್ ಫಿಕ್ಸ್ ಮಾಡಿರುವ ಶುಲ್ಕ ಕೊಡಬೇಕು.

ರೋಗಿ:- ಸಂದರ್ಶನದ ಫೀ ಎಷ್ಟು?

ಸ್ವಾ:- ಹೆಚ್ಚೇನಿಲ್ಲ, ಕೇವಲ ರೂ. 1,000/-. ಹೌದು, ನೀವು ಆಧಾರ್ ಕಾರ್ಡ್ ತಂದಿದ್ದೀರಾ?

ರೋಗಿ:- ಹಾಗೆಂದರೇನು? ನಾನು ಯಾವ ಕಾರ್ಡನ್ನು ಮಾಡಿಸಿಲ್ಲ. ಈ ದೇಶದಲ್ಲಿ ಹುಟ್ಟಿ ಬೆಳೆದ ಭಾರತೀಯ ನಾಗರೀಕ ಇಷ್ಟು ಹೇಳಿದರೇ ಸಾಲದೇ?

ಸ್ವಾ:- ಪರವಾಗಿಲ್ಲ ಬಿಡಿ. ರೂ. 200/- ಪಾವತಿಸಿ. ನಮ್ಮ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್‌ನಿಂದ ನಿಮಗಾಗಿ ವಿಶೇಷವಾಗಿ ಆಧಾರ್ ಕಾರ್ಡ್ ಮಾಡಿಸಿಕೊಡುತ್ತೇವೆ. ಎಷ್ಟಾದರೂ ನಮ್ಮದು ''ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್'' ಅಲ್ಲವೇ?

ರೋಗಿ:- ವೆರಿ, ವೆರಿ ಥಾಂಕ್ಸ್, ನಿಮ್ಮಲ್ಲಿ ಯಾವ ಯಾವ ತರಹದ ತಜ್ಞ ವೈದ್ಯರಿದ್ದಾರೆ?

ಸ್ವಾ:- ಈಗಾಗಲೇ ತಿಳಿಸಿದಂತೆ, ನಮ್ಮಲ್ಲಿ ಕಾಲಿನಿಂದ ಹಿಡಿದು ನೆತ್ತಿಯವರೆಗೂ, ಒಳಗೆ-ಹೊರಗೆ ಎಲ್ಲಾ ರೋಗಗಳಿಗೂ ಪ್ರತ್ಯೇಕ ಪ್ರತ್ಯೇಕ ತಜ್ಞ ವೈದ್ಯರಿದ್ದಾರೆ. ಒಮ್ಮೆ ಭೇಟಿ ಮಾಡಿ ನೋಡಿ, ನೀವು ಪದೇ-ಪದೇ ನಮ್ಮ ಆಸ್ಪತ್ರೆಗೆ ಬರುತ್ತೀರಿ. ಇದೇ ನಮ್ಮ ಹಾಸ್ಪಿಟಲ್‌ನ ಸ್ಪೆಷಾಲಿಟಿ;

ರೋಗಿ:- ಹಾಗೆಂದರೆ ಸ್ವಲ್ಪ ವಿವರಿಸಿ ಹೇಳಿ-

ಸ್ವಾ:- ಹೃದಯ, ನೇತ್ರ, ಕಿವಿ, ಮೂಗು, ಗಂಟಲು, ಮಕ್ಕಳು-ಮುದುಕರು, ಸ್ತ್ರೀ ರೋಗ, ಕೀಲು-ಮೂಳೆ ರೋಗ, ಕಿಡ್ನಿ, ಶ್ವಾಸಕೋಶ, ಉದರ, ದಂತ, ಸರ್ಜರಿ, ಮೂತ್ರ ರೋಗ, ಕೇಶ-ಚರ್ಮ ರೋಗ ಮುಂತಾದ ಎಲ್ಲ ವಿಧ ತಜ್ಞ ವೈದ್ಯರು ನಮ್ಮಲಿದ್ದಾರೆ. ನಮ್ಮದು ಎಷ್ಟಾದರೂ ''ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್'' ನೋಡಿ. ಈಗ ಹೇಳಿ ನಿಮಗೆ ಯಾವ ತಜ್ಞರ ಸೇವೆ ಬೇಕಿದೆ?

ರೋಗಿ:- ನೀವೇ ಹೇಳಿದಂತೆ ಮೊದಲು ಜನರಲ್ ಫಿಸಿಷಿಯನ್ ಅವರನ್ನು ಕಾಣುವುದು ಒಳ್ಳೆಯದಲ್ಲವೆ?

ಸ್ವಾ:- ಹೌದು, ಹೌದು, ಮೊದಲು ಅವರನ್ನು ಕಂಡು ಅವರ ಸಲಹೆಯಂತೆ ಚಿಕಿತ್ಸೆಗೆ ಒಳಗಾಗಿ.

ರೋಗಿ:- ನಿಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸಾ ವಿಧಾನ ಹೇಗೆ ಇರುತ್ತದೆ?

ಸ್ವಾ:- ಫಿಸಿಶಿಯನ್ನರ ಸಲಹೆಯಂತೆ ರೋಗಿಯನ್ನು ನಾನಾ ರೀತಿಯ ಪರೀಕ್ಷೆಗೆ ಒಳಪಡಿಸಲಾಗುವುದು. ಬಂದ ವರದಿಯನ್ನು ನೋಡಿ ರೋಗ ಯಾವುದೆಂದು ಪತ್ತೆ ಹಚ್ಚಲಾಗುವುದು. ಈ ವಿಧಾನ ಮೂರು ದಿನದ್ದು. ಅಲ್ಲಿಯವರೆಗೆ ರೋಗಿ ವಾರ್ಡಿನಲ್ಲಿರಬೇಕಾಗುವುದು. ರೋಗ ತೀವ್ರವಾಗಿದ್ದರೆ ಮತ್ತೊಮ್ಮೆ ಸೂಕ್ಷ್ಮ ಪರೀಕ್ಷೆಗಾಗಿ ICU ಗೆ ದಬ್ಬಲಾಗುವುದು. ಅಲ್ಲಿ 2 ರಿಂದ 3 ದಿನ ಇರಬೇಕು.

ರೋಗಿ:- ICU ನಲ್ಲಿದ್ದಾಗ ತಿಂಡಿ, ಊಟ ಹೇಗೆ?

ಸ್ವಾ:- Do not worry. ಮೂಗು-ಬಾಯಿಯೊಳಗೆ ಟ್ಯೂಬ್ ತುರುಕಿ ಡ್ರಿಪ್ಸ್ ಕೊಡುತ್ತಾರೆ. ಅದೇ ತಿಂಡಿ, ಊಟ.

ರೋಗಿ:- ನಮ್ಮ ಮನೆಯಿಂದ ತಿಂಡಿ, ಊಟ ತರಿಸಬಹುದೇ?

ಸ್ವಾ:- ಸುತರಾಂ ಕೂಡದು, ಡಯಟೀಷಿಯನ್ ಹೇಳಿದ ಆಹಾರ ಮಾತ್ರ ತಿನ್ನಬೇಕು. ಅದಕ್ಕೆ ಪ್ರತ್ಯೇಕ ಚಾರ್ಜ್. ಏನೆಂದರೂ ನಮ್ಮದು ''ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್'' ನೋಡಿ.

ರೋಗಿ:- ನನಗೊಂದು ಸಂಶಯ ಇದೆ.

ಸ್ವಾ:- ಹೇಳಿ ಸಾರ್! ನಾವಿರುವುದೇ ನಿಮ್ಮ ಸಂಶಯಗಳನ್ನು ದೂರ ಮಾಡಲು. ನಮ್ಮದು ಎಷ್ಟಾದರೂ. ''ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್'' ಅಲ್ಲವೇ?

ರೋಗಿ:- ನಿಮ್ಮಲ್ಲಿರುವುದು ಯಾವ ''ಪತಿ''? ಅಂದರೆ, ಯಾವ ಚಿಕಿತ್ಸಾ ಪದ್ಧತಿ ಎಂದು?

ಸ್ವಾ:- ಹಾಗೆಂದರೆ? ಅರ್ಥವಾಗಲಿಲ್ಲ?

ರೋಗಿ:- ಅಲೋಪತಿ, ನ್ಯಾಚುರೋಪತಿ, ಟೆಲಿಪತಿ, ಮ್ಯಾಗ್ನಟೋಪತಿ, ಯೂನಾನಿ, ಆಯುರ್ವೇದ, ಇತ್ಯಾದಿ.

ಸ್ವಾ:- ನಮ್ಮಲ್ಲಿರುವುದು ನೂರಕ್ಕೆ ನೂರು ಶುದ್ಧ ಅಲೋಪತಿ.

ರೋಗಿ:- ಮತ್ತೊಂದು ಸಂದೇಹವಿದೆ.

ಸ್ವಾ;- ಕೇಳಿ, ಸಂಕೋಚ ಬೇಡ.

ರೋಗಿ:- ನಿಮ್ಮಲ್ಲಿರುವ ಎಲ್ಲಾ ತಜ್ಞ ಅಲೋಪತಿ ಡಾಕ್ಟರುಗಳಿಗೆ ರೋಗಿಯ ಬಗ್ಗೆ "sympathy" ಏನಾದರೂ ಇದೆಯೆ?

ಸ್ವಾ:- ರೋಗಿ ಕೇಳಿದ ಪ್ರಶ್ನೆಗೆ ಸ್ವಾಗತಕಾರಿಣಿ ತಬ್ಬಿಬ್ಬಾದಳು. ಏನೆಂದು ಉತ್ತರಿಸಲು ಹೊಳೆಯಲಿಲ್ಲ, ಮೂಗಿನ ಮೇಲೆ ಬೆರಳಿಟ್ಟುಕೊಂಡು ಚಿಂತೆಗೊಳಗಾದಳು.

ರೋಗಿ:- ಸಿಸ್ಟರ್! ಒಳರೋಗಿಯಾಗಿ ಸೇರಲು ವಾರ್ಡ್ ಚಾರ್ಜ್ ಎಷ್ಟು?

ಸ್ವಾ:- ಜನರಲ್ ವಾರ್ಡಿಗೆ ದಿನವೊಂದಕ್ಕೆ ರೂ. 2,000/-, ಸೆಮಿ ಸ್ಪೆಷಲ್ ವಾರ್ಡಿಗೆ ರೂ. 4,000/- ಸ್ಪೆಷಲ್ ವಾರ್ಡಿಗೆ ರೂ. 5,000/- ಎಷ್ಟಾದರೂ ''ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್'' ಎಂಬುದನ್ನು ಮರೆಯಬೇಡಿ.

ರೋಗಿ:- ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಒಂದು ವಾರ ವಾರ್ಡಿನಲ್ಲಿದ್ದರೆ ಎಷ್ಟು ಖರ್ಚಾಗಬಹುದು?

ಸ್ವಾ:- ಶಸ್ತ್ರ ಚಿಕಿತ್ಸೆ, ಔಷಧೋಪಚಾರ, ಇತ್ಯಾದಿ, ಆಯಾ ತಜ್ಞ ವೈದ್ಯರನ್ನೇ ಕೇಳಿ.

ರೋಗಿ:- ಮತ್ತೊಂದು ಪ್ರಶ್ನೆ ಕೇಳಲೇ?

ಸ್ವಾ:- ಸಂಕೋಚವಿಲ್ಲದೇ ಕೇಳಿ, ನಾವಿರುವುದೇ ನಿಮಗಾಗಿ. ನೀವಿರುವುದೇ ನಮಗಾಗಿ, ನಮ್ಮ ಆಸ್ಪತ್ರೆಯಲ್ಲಿ ರೋಗಿಯ ಬಗ್ಗೆ ಸೌಜನ್ಯ ಪೂರ್ಣ ವ್ಯವಹಾರ. ಇದು ಆಡಳಿತಾಧಿಕಾರಿಗಳ ಕಟ್ಟಾಜ್ಞೆ.

ರೋಗಿ:- ಹೌದೇ? ಅಂದ ಹಾಗೆ ನಿಮ್ಮ ಆಡಳಿತಾಧಿಕಾರಿಗಳ ಹೆಸರೇನು?

ಸ್ವಾ:- ಅವರ ಹೆಸರು ಡಾಕ್ಟರ್ ಬುರುಡೆ. ಮಿಲಿಟರಿ ಸರ್ವೀಸಿನಲ್ಲಿ ಇದ್ದವರು, ಬಹು ಶಿಸ್ತಿನ ಅಧಿಕಾರಿ.

ರೋಗಿ:- ಒಂದು ವೇಳೆ ಸರ್ಜರಿ ನಂತರ ದುರಾದೃಷ್ಟಶಾತ್ ರೋಗಿ ''ಗೊಟಕ್'' ಎಂದರೆ ಮುಂದಿನ ವ್ಯವಸ್ಥೆ ಹೇಗೆ?

ಸ್ವಾ:- ಭಯಬೇಡ, ರೋಗಿಯ ''ಬಾಡಿ''ಯನ್ನು ಶುಭ್ರ ಬಿಳಿ ಬಟ್ಟೆಯಲ್ಲಿ ಚೆನ್ನಾಗಿ ಸುತ್ತಿ ಐಸ್‌ಛೇಂಬರಲ್ಲಿ 3 ದಿನಗಳವರೆಗೆ ಜೋಪಾನವಾಗಿ ಕಾದಿರಿಸಲಾಗುವುದು. ಆಸ್ಪತ್ರೆಯ ಬಿಲ್ ಚುಕ್ತಾ ಮಾಡಿ ''ಬಾಡಿ''ಯನ್ನು ಒಯ್ಯಬಹುದು.

ರೋಗಿ:- ಆಸ್ಪತ್ರೆ ಫೀನಲ್ಲಿ ಏನಾದರೂ ರಿಯಾಯಿತಿ ಉಂಟೋ?

ಸ್ವಾ:- ಕ್ಷಮಿಸಿ ಸಾರ್! ಉಚಿತ ಸೇವೆ, ರಿಯಾಯಿತಿ ಬೇಕಾದರೆ ಸರಕಾರಿ ಆಸ್ಪತ್ರೆ ಇದೆಯಲ್ಲ! ನಮ್ಮದು ಧರ್ಮಛತ್ರವಲ್ಲ, ''ಅಂತರಾಷ್ಟ್ರೀಯ ಖ್ಯಾತಿ ಪಡೆದ ಸೂಪರ್

ಸ್ಪೆಷಾಲಿಟಿ ಹಾಸ್ಪಿಟಲ್''.


ರೋಗಿ:- ಒಂದು ವಾರ ಒಳರೋಗಿಯಾಗಿರಲು ಅಂದಾಜು ಬಿಲ್ ಎಷ್ಟಾದೀತು? ಸರ್ಜರಿ ಕೇಸ್ ಆಗಿ 15 ದಿನ ಸ್ಪೆಷಲ್ ವಾರ್ಡಿನಲ್ಲಿರಲು ಅಂದಾಜು ಬಿಲ್ ಎಷ್ಟಾಗಬಹುದು? ತಿಳಿಸುವಿರಾ?

ಸ್ವಾ:- ಸಾಮಾನ್ಯ ರೋಗ, ಒಂದು ವಾರದ ಜನರಲ್ ವಾರ್ಡಿನ ಅಂದಾಜು ಖರ್ಚು ರೂ. 4 ಲಕ್ಷ ಮಾತ್ರ - ಸರ್ಜರಿ ಕೇಸ್, ಸ್ಪೆಷಲ್ ವಾರ್ಡ್‌ನಲ್ಲಿ 15 ದಿನ ಇದ್ದರೆ ಅಂದಾಜು ರೂ. 10 ಲಕ್ಷ. ನಮ್ಮ ಹಾಸ್ಪಿಟಲ್‌ನಲ್ಲಿ ಬಿಲ್ ಪಾವತಿಸಲು ನಗದು ಮಾತ್ರ. ಚೆಕ್, ಡಿ.ಡಿ.ಗೆ ಅವಕಾಶವಿಲ್ಲ. ಏಕೆಂದರೆ, IT ಮತ್ತು ED ಅವರಿಂದ ಭಾರೀ ಕಿರುಕುಳ. ಹೀಗಾಗಿ ನಮ್ಮದೆಲ್ಲವೂ ನಗದು ವ್ಯವಹಾರ.

ಸ್ವಾಗತಕಾರಿಣಿಯು ಹೇಳಿದ ಅಂದಾಜು ಖರ್ಚಿನ ಸುದ್ದಿ ಕೇಳುತ್ತಲೇ ರೋಗಿ ಪ್ರಜ್ಞೆ ತಪ್ಪಿ ಧೊಪ್ಪನೆ ಅಲ್ಲೇ ಕುಸಿದು ಬಿದ್ದ. ಗಾಬರಿಗೊಂಡ ಸ್ವಾಗತಕಾರಿಣಿ ಬಿಸಲೇರಿ ಬಾಟಲ್‌ನಿಂದ ರೋಗಿಯ ಮುಖಕ್ಕೆ ರಪ-ರಪ ನೀರೆರಚಿದಳು. ಅಕ್ಕ-ಪಕ್ಕದವರೆಲ್ಲಾ ಗುಂಪು ಕೂಡಿದರು. ಕೂಡಲೇ ಸ್ವಾಗತಕಾರಿಣಿ ತುರ್ತು ಸೇವಾ ಘಟಕಕ್ಕೆ ಫೋನ್ ಮಾಡಿದಳು. ಮೂರು ಮಂದಿ ತಜ್ಞ ವೈದ್ಯರು ಹಾಜರಾದರು. ಅವರ ಹಿಂದೆಯೇ ನಾಲ್ಕು ಜನ ಸೇವಕರು ಸ್ಟ್ರೆಚರ್ ಸಹಿತ ಬಂದರು.

ಒಬ್ಬ ತಜ್ಞರು ಬಿದ್ದ ರೋಗಿಯ ನಾಡಿ ಹಿಡಿದರು. ಮತ್ತೊಬ್ಬರು ಸ್ಟೆಥೋಸ್ಕೋಪ್ ಇಟ್ಟು ಹೃದಯ ಪರೀಕ್ಷಿಸಿದರು. ಮೂರನೇ ತಜ್ಞ ವೈದ್ಯರು ರೋಗಿಯ ಮೂಗಿನಡಿ ಬೆರಳಿಟ್ಟು ಪರೀಕ್ಷಿಸಿದರು. ಸ್ವಲ್ಪ ಹೊತ್ತಿನ ನಂತರ ಮೂರು ತಜ್ಞರೂ ದುಃಖದಿಂದ ತಲೆ ಕೆಳಗೆ ಮಾಡಿ, ರೋಗಿ ಮೃತನೆಂದು ಘೋಷಿಸಿ ನಿಟ್ಟುಸಿರು ಬಿಟ್ಟರು. ಬಳಿಕ 4 ಮಂದಿ ಸೇವಕರು ಮೃತ ವ್ಯಕ್ತಿಯನ್ನು ಅಂಗಾತನಾಗಿ ಸ್ಟ್ರೆಚರ್ ಮೇಲೆ ಮಲಗಿಸಿ, ''ಐಸ್ ಛೇಂಬರ್'' ಕಡೆಗೆ ಹೆಜ್ಜೆ ಹಾಕುತ್ತಾ ನಡೆದರು. ಮೃತ ವ್ಯಕ್ತಿಯ ಪ್ರಾಣ ಪಕ್ಷಿ ಮತ್ತೊಂದು ಲೋಕದತ್ತ ಹಾರುತ್ತಿತ್ತು. ಎಷ್ಟೆಂದರೂ ಅದು ''ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್'' ಅಲ್ಲವೇ? ಅಲ್ಲಿ ಎಲ್ಲವೂ ಸುಪರ್, ಮೋರ್ ಸುಪರ್, ಮೋಸ್ಟ್ ಸುಪರ್ ಟ್ರೀಟ್‌ಮೆಂಟ್, ಮೆಡಿಸಿನ್, ವಾರ್ಡ್ ಚಾರ್ಜ್, ಸೂಪರ್ ಖರ್ಚು. ಅಲ್ಲಿ ಎಲ್ಲವೂ ಸುಪರ್‌ಲೇಟಿವ್ ಡಿಗ್ರಿ. ಮೋಸ್ಟ್ ಅನ್‌ಕೈಂಡೆಸ್ಟ್ ಕಟ್ ಎಂಬಂತೆ ಡಬಲ್ ಸುಪರ್‌ಲೇಟಿವ್. ಹಣವಿಲ್ಲವರಿಗೆ ಇಂತಹ ಆಸ್ಪತ್ರೆ "ಒನ್ ವೇ".

■



# ''ಕ(ಳ)ಸಗಿತ್ತಿಯರು''

• ಪರಿಮಳ ಬಿ.

ಆಧುನಿಕ ಯುವತಿಯರು ನಾವು 21ನೇ ಶತಮಾನದ ನಾರೀ ಮಣಿಯರು ಚೂಡಿದಾರ್ ಸಂಸ್ಕೃತಿ ಮನೆಯಲ್ಲಿ ಟಿ.ವಿ, ಫ್ರಿಡ್ಜ್ ವಾಷಿಂಗ್ ಮೀಷಿನ್ ಇಟ್ಟು ಕೊಂಡಿರುವವರು ಮನೇನೊ ಮೊಜಾಯಿಕ್ ಮಾರ್ಬಲ್ ಕೈಯಲ್ಲಿ ಸ್ಮಾರ್ಟ್ ಫೋನ್.

ಸರಿ ಸೀರೆ ಇಲ್ಲ ಚೂಡಿ, ಜಡೆಯಿಲ್ಲ ಜುಟ್ಟು ತಾಳಿ ಕರಿಮಣಿ ಬಳೆ ಹೂವು, ಬ್ಯಾಕ್‌ಲೆಸ್ ಚ್ಲಾಪು. ಇವೆಲ್ಲಾ ಬೇಕೆನಿಸಿದಾಗ ಮಾತ್ರ ಪ್ರದರ್ಶಿಸೋ ಮಾರ್ಡನ್ ಮುತ್ತೈದೆಯರು ಇವರಿಗೆ ಕಸಗಿತ್ತಿಯರು ಅನ್ನೊಂದು ಎಷ್ಟು ಸೂಕ್ತ? ಛೇ ಏನು ಮೇಡಂ ನೀವು? ಅನ್ನ ಬೇಡಿ ತಾಳಿ. ತಾಳಿ.....

ಹಿಂದಿನ ಕಾಲಕ್ಕೆ ಹೋಗಿ, ರಾಮನವಮಿ, ಗಣೇಶ ಊರಿನ ರಾಜ್ಯೋತ್ಸವ ಎಲ್ಲ ಕಾಲದಲ್ಲೂ ವರ್ಷಕ್ಕೆ ಮೂರು – ನಾಲ್ಕು ಸಲ ತೇರು ರಥ ಮನೆ ಮುಂದೆ ಬೀದಿಗಳಲ್ಲಿ ಬರೋದು ಈಗಲೂ ಕೆಲವೆಡೆ ಹಳ್ಳಿಗಳಲ್ಲಿ ಹನುಮ ಜಯಂತಿ, ವಾಲ್ಮೀಕಿ, ಕನಕ ಇವರುಗಳು ಬರೋ ಪದ್ಧತಿ ಇದೆ. ಆಗ ಹೆಂಗಳೆಯರು ಮನೆ ಮುಂದೆ ದೊಡ್ಡ ದೊಡ್ಡ ರಂಗೋಲಿಗಳನ್ನು ಚಿತ್ತಾರವಾಗಿ ಬಿಡಿಸಿ ಅದಕ್ಕೆ ಬಣ್ಣ ತುಂಬಿ. ಒಂದು ಹರಿವಾಣದಲ್ಲಿ ಬಾಳೆ ಹಣ್ಣು, ಹೂವು, ಕರ್ಪೂರ, ತೆಂಗಿನ ಕಾಯಿ ಹಿಡಿದುಕೊಂಡು ನಿಂತು ತೇರು ಬಂದಾಗ ಅವರವರ ಮನೆ ಮುಂದೆ ನಿಲ್ಲಿಸಿದರೆ ಅರ್ಚಕ ಕರ್ಪೂರ ಆರತಿ ಮಾಡಿ ಹಣ್ಣು, ಕಾಯಿ ನೈವೇದ್ಯ ಮಾಡಿ ತಟ್ಟೆ ವಾಪಸ್ಸು ಕೊಟ್ಟು ಮುಂದಿನ ದಾರಿಗೆ ಹೋಗುತಿತ್ತು. ಈಗಲೂ ರಾಮನವಮಿಯಲ್ಲಿ ನಾನು ಇದೇ ಸಂಪ್ರದಾಯ ರೂಢಿಸಿಕೊಂಡು ಬಂದಿದ್ದೇನೆ.

ಇನ್ನು ಹಿಂದು ಸಂಪ್ರದಾಯಸ್ಥರ ಮದುವೆ ಮನೆಯಲ್ಲಿ ವರನ ಕಡೆ ವಧುವಿನ ಕಡೆ ಒಬ್ಬಬ್ಬ ಶೋಡಷಿಯರು ಕಲಶ ಹಿಡಿದು ಕೊಂಡು ಬೀಗುತ್ತಿರುತ್ತಾರೆ. ಒಂದು ಬೆಳ್ಳಿಯ ತಟ್ಟೆಯಲ್ಲಿ ಚಿಕ್ಕ ತಂಬಿಗೆ ಅದರಲ್ಲಿ ಓಕುಳಿ ನೀರು , ನಾಲ್ಕು ವೀಳೆಯ ದೆಲೆ, ಒಂದು ಚಿಕ್ಕ ಕಲಶ ಕನ್ನಡಿ ಅದಕ್ಕೆ ಹೂ ಮಾಲೆ, ಹಿಡಿದುಕೊಂಡು ಶೋಡಷಿಯರು ವರನಕಡೆ ವಧುವಿನ ಕಡೆಯಾವಾಗಲೂ ಜೊತೆಗೇ ಇರುತ್ತಾರೆ ಇವರೇ ನಾನು ಮೇಲೆ ಹೇಳಿದ ಕಳಸಗಿತ್ತಿಯರು

ಈಗ ಹೇಳ ಹೊರಟಿರುವುದು ಕಸಗಿತ್ತಿಯರ ಬಗ್ಗೆ ಬೆಳಿಗ್ಗೆ ಪೀ ಅಂತ ಒಬ್ಬ ಪೀಪಿವಾಲ ಮುನಿಸಿ ಪಾಲಿಟಿ ದಾಸಯ್ಯ ಅವನ ಹಿಂದೆ ಒಂದು ಡಗಾರ್ ಡಗಾರ್ ಅಂತ ಸದ್ದು ಮಾಡುವ ತೇರು ಕಸದ ತೇರು ಅರ್ಥಾತ್ ''ಕಸರಥ'' ''ದಶರಥ'' ಅಲ್ಲ ಸದ್ಯ. ಬರುತ್ತದೆ. ಅಲ್ಲೇ ಈಗ ಎಲ್ಲರ ಮನೆ ಮುಂದೆ ''ಕಸಗಿತ್ತಿ''ಯರೂ ಕಾಣಿಸಿಕೊಳ್ಳೊದು. ''ಹಸಿ ಕಸ–ಒಣ ಕಸ'' ಎರಡೂ ಬುಟ್ಟಿ ಬ್ಯಾಗು ಕವರು ಹಿಡಿದು ನಿಲ್ಲಬೇಕು. ಅವನು ಕಸ ಕಸಿದುಕೊಂಡು ಲಾರಿಗೆ (ತೇರಿಗೆ) ಒಳಗೆ ಬಿಸಾಕಿ ಬುಟ್ಟಿ ಮನೆಯ ಮುಂದೆ ಎಸೆದು (ಕೊಟ್ಟು) ಹೋಗುತ್ತಾನೆ.

ಅವನು ಸ್ವಲ್ಪ ದೂರ ಹೋದರೆ ಕಸಗಿತ್ತಿಯರು ''ಏ ಕಸಾ ಏ ಕಸಾ'' ಅಂತ ಕಿರುಚಿ ಕೊಳ್ತಾ ಇರ್ತಾರೆ. ಇಲ್ಲ ಚಿಕ್ಕ ಮಕ್ಕಳು ಬುಟ್ಟಿ ಹಿಡಿದಿದ್ದರೆ ಏ ''ಕಸಾ ಅಂಕಲ್'' ಬನ್ನಿ ಇಲ್ಲಿ ನಮ್ಮ ಬುಟ್ಟಿ ತೊಗೊಳ್ಳಿ ಅಂತ. ಇನ್ನು ಕೆಲಸದ ವೇಳೆ ಕೆಲಸದವಳು ಮನೆ ಕೆಲಸದವಳು ಬುಟ್ಟಿ ಹಿಡಿದಿದ್ದರೆ ಆ ಡೈಲಾಗೇ ಬೇರೆ ಜೋರು ಒಳಗೆ ಮಾಡೋ ಹಾಗೆ ಇಲ್ಲವೇ ಇಲ್ಲ ಅದಕ್ಕೆ ಏ

ಒಂದ್ನಿಷ ಕಾಯಕ್ಕೆ ಆಗಲ್ಲಾ ನಿಂಗೆ. ಕಸಾ ತರೊ ಗಂಟಾ ಪೀ ಪೀ ಊದಿ ಹೊರಟೇ ಬಿಡ್ತಿಯಲ್ಲಾ ಬರೋ ಗಂಟಾ ನಿಂಗೇನ್ ದಾಡಿ ಅಂತ ರೋಪು.

ಅವನು ಏಯ್ ನಿನ್ನೇ ಕಾಯ್ಕೊಂಡು ಕುಂತಿರ್‍ಲಾ? ಬೇರೆ ಯವರು ಬೈಯಾಕಿಲ್ವಾ ಮತ್ತೆ ಅಂತ ಅವನ ಉವಾಚ

ಸರಿ ಅಲ್ಲಿ ಇಬ್ಬರಿಗೂ ಈ ತರಹ ಸಮರ, ಯುದ್ಧ, ಮುಂದೆ ಕಾಯುತ್ತಾ ಇರುವವರು ಕೇಳಿಸಿ ಕೊಳ್ಳಲೇಬೇಕು.

ಅದು ಸರಿ ನೆನ್ನೆ ನಿಂಗೆ ಬರಕ್ಕೆ ಏನಾಗಿತ್ತು? ನೋಡು ಎರಡು ದಿನದ ಕಸ ಮಡಗಿ ಬುಟ್ಟಿ ತುಂಬೋಗೈತೆ.

ಸರಿ ಇದೆಲ್ಲಾ ಕೇಳಿ ಕೇಳಿ ಅವನಿಗೆ ಕಿವಿ ತೂತಾಗಿರತ್ತೆ ಕಸಗಿತ್ತಿಯರು ಒಳ್ಳೆಯವರಾಗಿದ್ದರೆ ಅವನ ಉತ್ತರ ಈ ರೀತಿ ಮಿನಿಸ್ಟರು ಸಾಹೇಬ್ರು ಒತ್ತಾವ್ರೆ ಅಂತ ಆ ಕಡೀಕೆ ನನ್ನ ಕೆಲಸ ಕೊಟ್ಟಿದ್ದು ಹೋದವಾರನೂ ಬರಲೇ ಇಲ್ಲ? ಕ್ಲೀನ್ ಸಿಟಿ ಇನ್ಸ್ಪೆಕ್ಟರು ಬಂದಿದ್ದಾರೆ ಅಂತ ಅಲ್ಲಿ ಡ್ಯೂಟಿ ಹಾಕಿದ್ದರು ಅಂತ ಅವನ ಸಮಜಾಯಿಷಿ.

ಆದರೆ ಪಾಪ ಬಡಪಾಯಿ ತಪ್ಪದೇ ಯುಗಾದಿ, ಗಣೇಶ, ಆಯುಧ ಪೂಜೆಗೆ ಬಂದೇ ಬರ್‍ತಾನೆ. ಕಸದ ರಾಶಿ ಬಾಳೆ ಕಂದು ಮಾವಿನ ಸೊಪ್ಪು, ಬೇವಿನ ಸೊಪ್ಪು ತುಂಬಿಕೊಂಡು ನಾವು ಕೊಡೋ ಪುಡಿಗಾಸು ಪುಡಿ ತಿಂಡಿ ಪೊಟ್ಟಣ, ಹೋಳಿಗೆ, ಮೀಠಾಯಿ, ಚಿತ್ರಾನ್ನದ ಕವರು ತೊಗೊಳ್ತಾನೆ. ಪಾಪ ಡ್ರೈವರ್ ಕೂಡ ದೂರದಿಂದಲೇ ವೀಕ್ಷಿಸುತ್ತಾ ಇರ್‍ತಾನೆ ಯಾರ್‍ಯಾರ ಮನೇಲಿ ಸಂದಾಯ ಆಗಿದೆ ಅಂತ. ಬಹುಷ 50-50 ಇರಬೇಕು.

ಇನ್ನು ಕೆಲವು ಜಗಳ ಗಂಟಿ ಕಸಗಿತ್ತಿಯರು ನಾವ್ಯಾಕೆ ದುಡ್ಡುಕೊಡಬೇಕು. ಕಾರ್ಪೋರೇಷನ್ ಸಂಬಳ ಕೊಡಲ್ವಾ ಕಸ ಎತ್ಕೊಂಡು ಹೋಗೊಂದು ಅವನ ಕೆಲಸನೇ ಅಲ್ವಾ ಅಂತಾರೆ.

ಇದೇ ಕಾರ್ಪೋರೇಷನ್ ಕಛೇರಿಗೆ ಬಂದು ಸಣ್ಣ ಕೆಲಸಕ್ಕೆ ಹೋದರೆ ಪ್ರತಿ ಟೇಬಲಿಗರೂ ಕೆಳಗೇ ಬಂದು ಕೈ ತೂಗಿಸ್ತಾನೇ ಇರುತ್ತಾರೆ. ಸಾವಿರದ ಕಮ್ಮಿ ಇಲ್ಲವೇ ಇಲ್ಲ ಸಕಾಲ ಇದ್ದರೂ ಅಷ್ಟೆ ಪರಕಾಲ್ ಇದ್ರೂ ಅಷ್ಟೇ, ಫೋನ್ ಕಾಲ್ ಇದ್ರೂ ಅಷ್ಟೆ. ಅದೇ ಈ ಕೆಲಸ ದವನಿಗೇ 4 ಪುಡಿ ಕಾಸು ಕೊಟ್ರರೇ ಏನ್ ತಪ್ಪು ನೀವೇ ಹೇಳಿ. ಅವನು ನಾಲ್ಕು ದಿನ ರಥ ಎಳ್ಕೊಂಡು ಬರದೇ ಇದ್ರೆ ಬೀದಿ ನಾಥ ಹೊಡೆಯಲ್ವಾ ಗಬ್ಬರ್ ನಾಥ್ ಆಗಲ್ವಾ. ಅದಕ್ಕೆ ಈ ಕಸನಾಥರಿಗೆ ಈ ಕ(ಳ)ಸಗಿತ್ತಿಯರು ಪಾಪ ಅನ್ನೋದು ತಪ್ಪಾ? ನೀವೇ ನಿಶ್ಚಯಿಸಿ. ■


ಅಪರಂಜಿ – ಹವ್ಯಾಸೀ ಲೇಖಕರು ಸೇರಿ
ನಡೆಸುತ್ತಿರುವ ಒಂದು ಸಾಹಸ.
ಇದಕ್ಕೆ ಜಾಹೀರಾತು ದೊರಕಿದರೆ ನಮ್ಮ ಕೆಲಸ ಸುಗಮ. ಈ ನಿಟ್ಟಿನಲ್ಲಿ
ತಾವು ಸಹಕರಿಸಲು ಇಚ್ಛಿಸಿದರೆ ದಯವಿಟ್ಟು ವಿವರಗಳಿಗೆ
ನಮ್ಮನ್ನು ಸಂಪರ್ಕಿಸಿ:
koravanjiaparanji@gmail.com

# ಮೈಸೂರು ಪಾಕ್! ಬಹುಪರಾಕ್!!

• ನಳಿನಿ ಸೂರ್ಯಪ್ರಕಾಶ್

ಮೊನ್ನೆ ಆಫೀಸಿನಲ್ಲಿ ರಾಜೀನ ಒಂದು ಪ್ರಶ್ನೆ ಕೇಳ್ದೆ. ಸಿಹಿ ಹಾಕದೇ ಮಾಡೋ ಸಿಹಿ ತಿಂಡಿ ಯಾವುದು ಅಂತ. ಯೋಚನೆ ಮಾಡಿ, ಕೊನೆಗೆ ಅಡ್ಡಡ್ಡ ಗೋಣಾಡಿಸಿ, ''ಸೋತೆ'' ಅಂದ್ಲು. ನಾನು ''ಚಿರೋಟಿ, ಪೇಣಿ'' ಅಂದೆ.

ನನಗೆ ಸಿಹಿ ಅಂದ್ರೆ ತುಂಬಾ ಇಷ್ಟ ಅಂತ ರಾಜಿ ನನಗೆ 'ಗೊದ್ದ' ಅಂತ ಹೆಸರಿಟ್ಟಿದಾಳೆ. ಸಿಹಿ ತಿನ್ನುವುದರ ಜೊತೆಗೆ 'ಸಿಹಿ' ಚಿಂತನೆಗಳನ್ನ ಮಾಡೋದೂ ನನಗಷ್ಟೇ ಇಷ್ಟ. ಉದಾಹರಣೆಗೆ, 'ಮಾವಿನ ಹಣ್ಣಿನ ಕೇಸರಿಭಾತ್‌ಗೆ ಕೇಸರಿ ದಳಗಳು ಹೊಂದತ್ತೋ ಇಲ್ವೋ, ಕ್ಯಾರೆಟ್ ಹಲ್ವಾ ಮಾಡೋವಾಗ, ಖೋವಾ ಬದಲಾಗಿ ಧಾರವಾಡ ಪೇಡ ಬೆರೆಸಿದ್ರೆ ಹೇಗೆ....?' ಮುಂತಾದವು. ಹಾಗಂತ ನಾನೋರ್ವ ಪಾಕ ಪ್ರವೀಣೆ ಅಂದ್ಕೊಂಡ್ಬಿಟ್ಟೀರಿ ಮತ್ತೆ! ಸಿಹಿ ತಿನಿಸುಗಳನ್ನು ಮಾಡೋದಕ್ಕಿಂತಲೂ, ಮಾಡೋದನ್ನ ನೋಡೋದು ಅಂದ್ರೆ ನನಗೆಲ್ಲಿಲ್ಲದ ಆಸಕ್ತಿ.

ಸದ್ಯದಲ್ಲೇ ರಿಟೈರ್ ಆಗ್ತಿರೋ ಖುಷಿಗೆ ಆಫೀನಲ್ಲೊಬ್ರು ಪಾರ್ಟಿ ಕೊಟ್ರು, ರಾಜಿ ಅವಳ ಪಾಲಿನ ಸ್ವೀಟು ನಂಗೇ ಕೊಟ್ಳು. ''ಹಾರ್ಲಿಕ್ಸ್ ಮೈಸೂರು ಪಾಕು. ನಂಗಷ್ಟಕ್ಕಷ್ಟೇ'' ಅಂದಳು. ''ಮೈಸೂರ್ ಪಾಕಲ್ಲ..... ಬರ್ಫಿ'' ಅಂದೆ.

''ವ್ಯತ್ಯಾಸ ಏನು....?''

''ವ್ಯತ್ಯಾಸ........ ಹಮ್ಮ್......... ಅದು ಅದೇ, ಇದು ಇದೇ...!''. ರಾಜಿಯೇನೋ ನಕ್ಕಳು. ನಾನು ನಗಲಿಲ್ಲ. ಆದಷ್ಟು ಬೇಗ ಈ 'ಸಿಹಿ' ಸಂದೇಹವನ್ನು ಬಗೆಹರಿಸಿಕೊಳ್ಳಬೇಕೆಂಬ ತುಡಿತ ನನ್ನಲ್ಲಿ ಹೆಚ್ಚಾಯ್ತು. ಈಗೇನು, ಯಾವ ವಿಷಯವಾದ್ರೂ ಸರಿ, ಎಂತಹ ಗುಗ್ಗುವಾದ್ರೂ ಗೂಗಲಿಸಿ ಹೇಳಬಲ್ಲ. ನಾನು ಮಾಡಿದ್ದೂ ಅದನ್ನೇ.

ಮೈಸೂರು ಪಾಕಿಗೆ ಚೆನ್ನಾಗಿ ಕಾದ, ಹೊಗೆಯಾಡುವ ತುಪ್ಪ ಒಳಸೋದ್ರಿಂದ ಇದರ ತಯಾರಿಯಲ್ಲಿ ವಿಪರೀತ ಶಾಖವಿರತ್ತೆ. ಕಡಲೆ ಹಿಟ್ಟು ಹುರಿಯಲ್ಪಡುವುದೂ ಈ ಶಾಖದಿಂದಲೇ. ಇನ್ನೊಂದು ವೈಶಿಷ್ಟ್ಯತೆ ಇರೋದು ಇದರ ಬಣ್ಣದಲ್ಲಿ, ಮೇಲಿನ, ಕೆಳಗಿನ ಭಾಗಗಳು ಹಳದಿ ಅಥವಾ ಬಂಗಾರ ಬಣ್ಣದಿಂದ ಕೂಡಿದ್ದರೆ, ಮಧ್ಯಭಾಗ ಕಂದು ಬಣ್ಣ. ಈ ಬಣ್ಣಗಳಿಂದಲೇ ಆ ವಿಶಿಷ್ಟ ರುಚಿ!

ನೊರೆ ನೊರೆಯಾದ ಹದಕ್ಕೆ ಬಂದ ಆ ಕಡಲೆಹಿಟ್ಟು – ತುಪ್ಪ – ಸಕ್ಕರೆಯ ಮಿಶ್ರಣವನ್ನು ಮುಖ್ಯವಾಗಿ ಸ್ವಲ್ಪ ಆಳವಾದ ತುಪ್ಪಸವರಿದ ತಟ್ಟೆಗೆ ಸುರಿಯಬೇಕು. ಮಿಶ್ರಣವನ್ನು ಆರುವುದಕ್ಕೆ ಬಿಟ್ಟಾಗ, ಮೇಲಿನ ಭಾಗದ ಶಾಖ ಹೊರಗಿನ ವಾತಾವರಣಕ್ಕೆ ಹರಡಿಕೊಂಡು ಬೇಗ ತಣ್ಣಗಾದ್ರೆ, ಕೆಳಗಿನ ಭಾಗದ ಶಾಖವನ್ನು ತಟ್ಟೆ ಹೀರಿಕೊಂಡು, ಕೆಳಗಿನ ಭಾಗವೂ ಬೇಗ ತಣ್ಣಗಾಗತ್ತೆ. ಆದ್ರೆ ಮಿಶ್ರಣದ ಮಧ್ಯಭಾಗದ ಶಾಖ ಬೇಗ ಹೊರಬರಲಾಗದೇ, ಶಾಖದಿಂದ ಮಿಶ್ರಣವೇ ತುಸು ಹೆಚ್ಚು ಹುರಿಯಲ್ಪಟ್ಟಂತಾಗಿ, ಮಧ್ಯಭಾಗ ಕಂದು ಬಣ್ಣಕ್ಕೆ ತಿರುಗತ್ತೆ. ವಿಪರೀತ ಶಾಖ, ಆಳವಾದ ತಟ್ಟೆ ಎರಡೂ ಇಲ್ದಿದ್ರೆ

ಒಂದೇ ಬಣ್ಣದ ಬರ್ಫಿ ತಯಾರಾದೀತು.

ಹೀಗೇ ನಾನು ಕಂಡುಕೊಂಡ ಈ ಸುಜ್ಞಾನ, ನಮ್ಮ ಮೈಸೂರಿಗೂ, ಮೈಸೂರು – ಪಾಕಿಗೂ ಇರುವ ಸಂಬಂಧದ ಬಗ್ಗೆ ನನ್ನ ಕುತೂಹಲ ಕೆರಳಿಸಿತು. ಗೂಗಲಿಸಿದೆ. ಮೈಸೂರಿನ ಮಹಾರಾಜರಾಗಿದ್ದ ಕೃಷ್ಣರಾಜ ಒಡೆಯರರಿಗೆ ಒಮ್ಮೆ ಊಟದ ಜೊತೆಗೆ ಹೊಸ ಬಗೆಯ ಸಿಹಿ ತಿನಿಸು ಬೇಕೆನಿಸಿತಂತೆ. ಅರಮನೆಯ ಅಡುಗೆಯವರಾಗಿದ್ದ ಕಾಕಾಸುರ (ಪಾಕಾಸುರ?!) ಮಾದಯ್ಯನವರು ತಮ್ಮ ಕೌಶಲ್ಯದಿಂದ ಕಡಲೆಹಿಟ್ಟು – ತುಪ್ಪ – ಸಕ್ಕರೆಯ ಮಿಶ್ರಣದ ಹೊಸ ಬಗೆಯ ಸಿಹಿಯೊಂದನ್ನು ತಯಾರಿಸಿ ಕೊಟ್ರಂತೆ. ಬಹಳ ರುಚಿಯಾಗಿದ್ದ ಆ ಸಿಹಿ ತಿನಿಸನ್ನು ಮತ್ತೊಮ್ಮೆ ಕೇಳಿ ಸವಿದ ಮಹಾರಾಜರು ಅದರ ಹೆಸರೇನೆಂದು ಮಾದಯ್ಯನವರನ್ನು ಕೇಳಿದ್ರಂತೆ. ಅದಕ್ಕೆ ಮಾದಯ್ಯನವರು ಥಟ್ಟನೆ, ''ಮೈಸೂರು ಪಾಕ'' ಅಂದ್ರಂತೆ.

ನನಗಂತೂ ಮಹದಾನಂದವಾಯ್ತು. ಕಾರಣ, ನನ್ನಲ್ಲಿ ಇತ್ಯರ್ಥವಾಗದೇ ಉಳಿದಿದ್ದ ಸಿಹಿಗೊಂದಲವೊಂದು ತಾನಾಗೇ ಬಗೆಹರಿದಿತ್ತು! ಇದೆಂಥಾ ಕಾ(ಪಾ)ಕತಾಳೀಯ ಅಂತೀನಿ! ಹಿಂದೊಮ್ಮೆ 'ಸಿಹಿ ಸಾಮ್ರಾಜ್ಯದ ರಾಜ ಯಾರು' ಎಂಬ ಚಿಂತನೆಯಲ್ಲಿದ್ದೆ. ಆದರೆ ಈ ವರ್ಗೀಯ 'ಸಿಹಿ' ವ್ಯಂಜನಗಳ ಪೈಪೋಟಿ – ಜಗಳಗಳಿಂದ, ನನ್ನ ಚಿಂತನೆ ಚಿಂತೆಯಾಗಿ, ವಿಷಯ ನೆನಗುದಿಗೆ ಬಿದ್ದಿತ್ತು. ಲಾಡುಗಳು ಲಡಾಯಿಗೆ ನಿಂತರೆ, ಹೋಳಿಗೆಗಳೊಳಗೆ ಒಳ ಜಗಳ ಶುರುವಾಯ್ತು. ಹಲ್ವಾಗಳು ನಾವಿಲ್ವಾ ಅಂತ ಅಲವತ್ತುಕೊಂಡ್ವು. ಕಜ್ಜಾಯ ಅತಿರಸಗಳು, 'ಅತಿರಥ ಮಹಾರಥರು ನಾವೇ' ಅಂತ ಘೋಷಿಸಿಬಿಟ್ವು. ಇನ್ನು ಜಾಮೂನು, ರಸ ಗುಲ್ಲಾಗಳಿಗೆ ತಿಳಿದರೆ, ಪಾಕದೋಕುಳಿಯೇ ಹರಿದೀತು! ನನಗ್ಯಾಕೋ ಇರಲಾರದೇ ಇರುವೆ ಬಿಟ್ಟುಕೊಂಡಂತಾಯ್ತು! (ಅದೂ ಸಿಹಿ ಮೆತ್ತಿಕೊಂಡು!) ಈ ರಾಜಪದವಿಯ ಚಿಂತನೆ ಕೈಬಿಟ್ಟೆ.

ಆದರೀಗ! ಮೈಸೂರು ಅರಮನೆಯ ಅಡುಗೆ ಮನೆಯಲ್ಲಿ ಹುಟ್ಟಿ, ಮೊದಲು ಮಹಾರಾಜರಿಂದಲೇ ಸವಿಯಲ್ಪಟ್ಟು, ಹುಟ್ಟುತ್ತಲೇ ಮಹಾರಾಜರ ಮೆಚ್ಚುಗೆ ಪಡೆವುದಕ್ಕಿಂತ ದೊಡ್ಡ ಅರ್ಹತೆ, ಸಿಹಿ ಸಾಮ್ರಾಜ್ಯದ ರಾಜನೆನಿಸಿಕೊಳ್ಳಲು ಇನ್ನೇನಿದೆ?

ಅಂತೂ ಸಮರ ಮುಂದುವರಿಯದೆ, ಎಲ್ಲ ವರ್ಗೀಯ, ಅವರ್ಗೀಯ ಸಿಹಿ ವ್ಯಂಜನಗಳೂ ಸಮರಸದಿಂದ ಒಪ್ಪಿದ ಮೇಲೆ, 'ಮೈಸೂರು ಪಾಕ್'ಗೆ ರಾಜಪದವಿ ಕೊಟ್ಟೆ.

ನಮ್ಮ ಅಡುಗೆ ಮನೆಯಲ್ಲೂ ಒಮ್ಮೆ ಹದಕ್ಕೆ ಬಂದ ಈ ಸಿಹಿ ರಾಜನನ್ನು ಆಳವಾದ ತುಪ್ಪಸವರಿದ ತಟ್ಟೆಗೆ ಸುರಿಯುವಾಗ, ಮನದಲ್ಲಿ ಸಣ್ಣದಾಗಿ ಭಯ ಮಿಶ್ರಿತ ಆತಂಕ! ಥೇಟ್ ಆಸ್ಥಾನದಲ್ಲಿ ಮಹಾರಾಜರ ಆಗಮನ ತರುವ ಭಯ – ಆತಂಕದ ಹಾಗೆ! ಮರುಕ್ಷಣವೇ, ಘಮಲು ಹರಡುತ್ತಾ ತಟ್ಟೆಯಲ್ಲಿ ವಿರಾಜಮಾನವಾದ 'ಪಾಕ', ಸಿಂಹಾಸನವನ್ನಲಂಕರಿಸಿದ ಮಹಾರಾಜನಂತೆ ಕಂಡ, ಆನಂದದಿಂದ ''ಮೈಸೂರು ಪಾಕ್! ಬಹುಪರಾಕ್!!'' ಎಂದೆ.

---

**ನಗು** ಒಂದು ಸ್ವಾಮ್ಯ ನಿನಗೂ ನನಗೂ
ನಿನ್ನಲ್ಲೂ ಇದೆ ನಗೂ
ನನ್ನಲ್ಲೂ ಇದೆ ನಗೂ
ಇದು ಗೊತ್ತಿದೆ ಇಬ್ಬರಿಗೂ

## STATEMENT OF OWNERSHIP OF APARANJI
## (KANNADA MONTHLY)
## (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Nath |
| | Nationality | : | Indian |
| | Address | : | Ravi Graphics<br>53/8, 2nd Main Road,<br>Indl. Town, Rajajinagar<br>Bangalore - 560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore - 560003 |
| 5. | Editor's Name | : | M. ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore - 560003 |
| 6. | Name and address of Individuals who own the Paper | : | Koravanji Aparanji Trust<br>36, 6th Main Road<br>Malleswaram<br>Bangalore - 560003 |

I M. Shivakumar hereby declare that the particulars given above are true to the best of my knowledge and belief.

1-3-2019 **M. ShivaKumar**
Bangalore (Signature of the Publisher)

# ಕಾರ್ಟೂನ್ ಪ್ರಸನ್ನ

• ಸಂಕೇತ್ ಗುರುದತ್

ಕನ್ನಡ ವ್ಯಂಗ್ಯಚಿತ್ರ ಲೋಕದಲ್ಲಿ 'ಕಾರ್ಟೂನ್ ಪ್ರಸನ್ನ' ಎಂದೇ ಖ್ಯಾತರಾಗಿದ್ದ ತುಮಕೂರಿನವರಾದ ಪ್ರಸನ್ನ ಅವರು ಇನ್ನಿಲ್ಲ. ನಾಡಿನ ವ್ಯಂಗ್ಯಚಿತ್ರ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ್ದ ಬಿ ವಿ ರಾಮಮೂರ್ತಿ ಹಾಗೂ ನಾಡಿಗ್ ಅವರ ಸಮಕಾಲೀನರಾಗಿದ್ದ ಪ್ರಸನ್ನ ಅವರು ವ್ಯಂಗ್ಯಚಿತ್ರ ರಚನೆಯನ್ನು ಪ್ರವೃತ್ತಿಯಾಗಷ್ಟೇ ರೂಢಿಸಿಕೊಂಡಿದ್ದರು. ಬಹುಶಃ ತುಮಕೂರಿನಲ್ಲಿ ಮೊದಲ ಬಾರಿಗೆ ವ್ಯಂಗ್ಯಚಿತ್ರ ಕ್ಷೇತ್ರಕ್ಕೆ ಕಾಲಿಟ್ಟವರು ಪ್ರಸನ್ನ ಅವರೇ ಇರಬೇಕು. ವ್ಯಂಗ್ಯಚಿತ್ರಕಾರನಲ್ಲಿ ಇರಬೇಕಾದ ಸಾರ್ವಕಾಲಿಕ ಆಲೋಚನೆಯನ್ನು ಈ ಪ್ರಸನ್ನ ಅವರು ಹೊಂದಿದ್ದರಲ್ಲದೇ ಈ ದಿನಮಾನದ ವ್ಯಂಗ್ಯಚಿತ್ರಕಾರರಿಗೆ ಮಾದರಿಯಾಗಿದ್ದಾರೆ.

ತುಮಕೂರಿನ ಹೊರಗಿನ ಅಭಿಮಾನಿಗಳಿಗೆ 'ತುಂಕೂರು ಪ್ರಸನ್ನ' ಎಂದೂ ಅವರ ಆತ್ಮೀಯ ಬಳಗದಲ್ಲಿ 'ಮೇಷ್ಟ್ರು' ಎಂದೂ ಪರಿಚಿತರಾಗಿದ್ದರು. ಕನ್ನಡದ ಖ್ಯಾತ ನಟ ಹಾಗೂ ನಾಟಕಕಾರ ಟಿ ಎಸ್ ಲೋಹಿತಾಶ್ವ ಅವರ ಸಹಪಾಠಿ ಹಾಗೂ'ಜಿಗ್ರಿ ದೋಸ್ತ್' ಆಗಿದ್ದ ಪ್ರಸನ್ನ ಅವರು ಮಾತಿನ ಮಲ್ಲರೂ ಆಗಿದ್ದು ನಿರಂತರ ಹಾಸ್ಯ ಚಟಾಕಿಯನ್ನು ಹಾರಿಸುತ್ತಿದ್ದರು. ವ್ಯಂಗ್ಯಚಿತ್ರಗಳನ್ನು ಹೇಗೆ ಬರೆಯಬೇಕು, ಹೇಗೆಲ್ಲ ಪಂಚ್ ಕೊಡಬೇಕು, ಯಾವ ವಿಷಯ ಬೇಗ ಜನರನ್ನು ತಲುಪುತ್ತದೆ ಎಂಬೆಲ್ಲ ವಿಷಯಗಳನ್ನು ಸರಳವಾಗಿ ಹೊಸದಾಗಿ ವ್ಯಂಗ್ಯಚಿತ್ರ ಕ್ಷೇತ್ರಕ್ಕೆ ಕಾಲಿಟ್ಟವರಿಗೆ ಕಲಿಸಿಕೊಡುತ್ತಿದ್ದರು.

ಪೂರ್ಣಿಮಾ ಸಾಹಿತ್ಯ ಮಂದಿರ ಪ್ರಕಾಶನದ ಪ್ರಸನ್ನ ಅವರ 'ನಕ್ಕು ಪ್ರಸನ್ನರಾಗಿ' ನೂರು ನಗೆಚಿತ್ರಗಳ ಪುಸ್ತಕಕ್ಕೆ ಬರೆದು ಕೊಟ್ಟ 'ಗೀಚುವಾಣಿ' ಯಲ್ಲಿ ಅ ರಾ ಮಿತ್ರ ಅವರ ಆತ್ಮೀಯ ನುಡಿ ಹೀಗಿದೆ: ಗೆಳೆಯ ಪ್ರಸನ್ನ ಚಿರಕಾಲದಿಂದ ನನಗೆ ಪರಿಚಿತರು. ಅವರ ಸೂಕ್ಷ್ಮ ನಿರೀಕ್ಷಣ ಶಕ್ತಿಯನ್ನೂ, ಲಾಸ್ಯವನ್ನೂ, ಸಾಮಾಜಿಕ ಕಾಳಜಿಯನ್ನೂ ನಾನು ಅವರ ವ್ಯಂಗ್ಯಚಿತ್ರಗಳಲ್ಲಿ ನಾನು ತುಂಬಾ ಮೆಚ್ಚಿಕೊಂಡಿದ್ದೇನೆ. 'ವ್ಯಂಗ್ಯ' ಎಂಬ ಮಾತಿಗೆ ಕನ್ನಡದಲ್ಲಿ ಕುಹಕ, ಲೇವಡಿ, ಮೊದಲಾದ ಅರ್ಥಗಳಿರುವಂತೆ ತುಂಬಾ 'ಧ್ವನಿಪೂರ್ಣವಾದದ್ದೂ' ಎಂಬ ವಿಶೇಷಾರ್ಥವೂ ಇದೆ. ಪ್ರಸನ್ನ ಅವರ ವ್ಯಂಗ್ಯಚಿತ್ರಗಳು ಈ ಎರಡೂ ಅರ್ಥಗಳನ್ನು ಸಾಧಿಸುವ ದಿಕ್ಕಿನಲ್ಲಿ ಸಮರ್ಥವಾಗಿ ದುಡಿದಿದೆ. ಚಿತ್ರಲೋಕ, ವ್ಯಾಖ್ಯಾನ ಲೋಕ ಎರಡನ್ನೂ ಪ್ರಸನ್ನರು ಒಂದಕ್ಕೊಂದು ಪೂರಕವಾಗುವಂತೆ, ಒಂದರಿಂದ ಒಂದು ಸತ್ವದ ಸಾಣೆ ಹಿಡಿಸಿಕೊಳ್ಳುವಂತೆ ಕೌಶಲ್ಯವನ್ನು ಪ್ರದರ್ಶಿಸಿದ್ದಾರೆ. ಗೆರೆಗಳು ತುಂಬಾ ಜೀವಂತಿಕೆಯಿಂದ ಪುಟಿದು ಅರ್ಥಲೋಕಕ್ಕೆ ದಾಳಿ ಇಟ್ಟು ಸಾರ್ಥಕವನ್ನಿಸಿದೆ. (ಅವಧಿಯಲ್ಲಿ ಪ್ರಕಟವಾದ ಸಂಕೇತ್ ಗುರುದತ್ ಅವರ ಲೇಖನದ ಆಧಾರಿತ.)







ಕೂಗ್ತೀನಿ.......... ಎಲ್ಲಾ ನಂಬರ್ ಪ್ರಕಾರ ಬರಬೇಕು.








HAIR CUTTING TRAINING CENTER
ಆಯುಷ್ಯಮ್ಮ ತರಬೇತಿ ಕೇಂದ್ರ.

# ಮಗಳ ಉಡುಗೊರೆ

• ಶಿಲ್ಪ

ಮದ್ವೆ ಮನೇಂದ್ರೆ ಎಲ್ರಿಗೂ ಸಂಭ್ರಮ. ಅಲ್ಲಿ ನೂರಾರ್ ಜನ ಸೇರಿದ್ರೆ ನೂರಾರ್ ತರಹ ಮಾತು. ಛತ್ರ ಹೇಗಿದೆ, ಇದರ ಛಾರ್ಜು ಎಷ್ಟು, ಅಡಿಗೆಯವರು ಯಾರು ಅಂತ ಪ್ರಾರಂಭವಾಗೋ ಮಾತು ಅವರವರು ಮದುವೆಯಾದ ದಿನಗಳನ್ನು ನೆನಪು ಮಾಡಿಕೊಳ್ಳೂತ್ವೆ. ಮದುಮಕ್ಕಳಿಗೆ ಮುಂದಿನ ದಿನಗಳ ಕನಸು, ತಂದೆ ತಾಯಿಯರಿಗೆ ಮಗಳನ್ನು ಕಳಿಸಿಕೊಡುವ ಬೇಜಾರು, ಗಂಡಿನ ತಂದೆ ತಾಯಿಯರಿಗೆ ಸೊಸೆಯನ್ನು ಮನೆ ಸೇರಿಸಿಕೊಳ್ಳುವ ಸಂಭ್ರಮ, ಇವೆಲ್ಲಾ ಮಾಮೂಲಿ. ಮದುವೆಗೆ ಬಂದೋರು ಅಲ್ಲಾ, ಮದುವೆಯಾದ ಮೇಲೆ ಹುಡುಗ ಹುಡುಗಿ ಸಪರೇಟ್ ಆಗಿ ಇರ್ತಾರೋ ಇಲ್ಲಾ ತಂದೇ ಮನೇಲೇ ಇರ್ತಾರೋ, ಫಸ್ಟ್ ನೈಟು ಛತ್ರದಲ್ಲೋ ಇಲ್ಲಾ ಯಾವುದಾದರೂ ಹೋಟೆಲಿನಲ್ಲೋ, ಹನಿಮೂನಿಗೆ ಎಲ್ಲಿಗೆ ಹೋಗ್ತಾರಂತೆ ಮುಂತಾದ ವಿಚಾರಗಳ ಬಗೆಗೆ ಚರ್ಚೆ ಮಾಡ್ತಿರ್ತಾರೆ. ಹೆಂಗಸರೆಲ್ಲಾ ಬೇರೆ ಹೆಂಗಸರು ಉಟ್ಟಿರುವ ಸೀರೆ, ಹೇರಿಕೊಂಡಿರುವ ಒಡವೆಗಳ ಬಗೆಗೆ ಕುತೂಹಲದ ದೃಷ್ಟಿ ಬೀರುತ್ತಿರುತ್ತಾರೆ. ಅಪರೂಪದ ಸ್ನೇಹಿತರು ಸಿಕ್ಕಾಗ ಜೋರು ಹರಟೆಗಳು ನಡೆಯುತ್ತಿರುತ್ತವೆ. ಇಂಥಾ ಗಿಜಿಬಿಜಿಯಲ್ಲೂ ಅಲ್ಲಿ ಆಗಾಗ ತಮಾಷೆಗಳು ಮಾತುಗಳು ಕೇಳಿಬರುತ್ತಿರುತ್ತವೆ. ಈ ನಡುವೆ ಸುಮಾರು ಐವತ್ತು ವರ್ಷದ ಪುರೋಹಿತರನ್ನು ವರ ಏನ್ ಸ್ವಾಮಿ ನೀವು ಇಷ್ಟೊಂದು ಮದುವೆ ಮಾಡಿಸಿದೀರ ನಿಮಗೊಂದು ಸರಿಯಾದ ಹುಡುಗಿ ಹುಡುಕ್ಕೊಳೋಕೆ ಆಗಲಿಲ್ವೇ ಅಂತ ಕೇಳಿದ. ಅದಕ್ಕೆ ಪುರೋಹಿತರು ನೀನು ಹೇಳಿದ ಹಾಗೇ ನಡೆದಿತ್ತಯ್ಯ. ಒಂದು ಮದುವೆ ನಿಂತ್ ಹೊಗೋ ಹಾಗಾಗಿತ್ತು. ಆಗ ನಾನು ನೀವೆಲ್ಲ ಒಪ್ಪಿದರೆ ನಾನೇ ಈ ಕನ್ಯೆಯನ್ನು ಮದುವೆ ಆಗ್ತೀನಿ ಅಂದೆ. ಎಲ್ಲಾ ಸಂತೋಷ ಪಟ್ಟರು. ನಾನೂ ಕೂಡಾ ಸಿದ್ಧವಾದೆ. ಆದರೆ ಅಷ್ಟರಲ್ಲಿ ಅದೆಲ್ಲಿದ್ನೋ ಒಬ್ಬ ಸಾಫ್ಟ್‌ವೇರು ಬಂದು ಏನ್ ಸ್ವಾಮಿ ಗಿಣಿ ತಗೊಂಡು ಹೋಗಿ ಗಿಡುಗನ ಕೈಗೆ ಕೊಡ್ತಿದೀರಲ್ಲ. ನೀವು ಒಪ್ಪಿದರೆ ನಾನು ನಿಮ್ಮ ಮಗಳನ್ನು ಮದುವೆಯಾಗಿ ಮುಂದಿನ ತಿಂಗಳೇ ಅಮೆರಿಕಾಕ್ಕೆ ಕರ್ಕೊಂಡು ಹೋಗ್ತೀನಿ ಅಂದ. ಅಮೆರಿಕ ಅಂದ್ಕೂಡ್ಲೆ ಎಲ್ರೂ ಬಾಯಿಬಿಟ್ಟು ನನ್ನ ಬಾಯಿಗೆ ಮಣ್ ಹಾಕ್ಬಿಟ್ರು. ಅಲ್ಲಿಂದೀಚೆಗೆ ನನಗೆ ವಿವಾಹದ ಯೋಗವೇ ಬಂದಿಲ್ಲ ಅಂದ್ರು. ಅದಕ್ಕೆ ವರ ಹೋಗ್ಲಿ ಬಿಡಿ ಈ ಜನ್ಮದಲ್ಲಿ ನೂರಾರು ಮದುವೆ ಮಾಡಿಸಿರೋ ನಿಮಗೆ ಮುಂದಿನ ಜನ್ಮದಲ್ಲಿ ಮೂರಾದರೂ ಮದುವೆಯಾಗೊ ಯೋಗ ಬರಬಹುದು ಅಂದ. ಭೋಜನ ಕೂಟದ ಸಂದರ್ಭ. ಮಗಳು ತಂದೆಯ ಹತ್ತಿರ ಬಂದು ಅವರ ಕೈಯಲ್ಲಿ ಏನನ್ನೋ ಇಟ್ಟು ನಕ್ಕಳು. ತಂದೆ ಅದನ್ನು ನೋಡಿ ಸಂತಸದ ಮುಖ ಮಾಡಿ ಅದನ್ನು ಜೋಬಿಗೇರಿಸಿಕೊಂಡರು. ಎಲ್ರಗೂ ಕುತೂಹಲ ಮಗಳು ಏನು ಕೊಟ್ಟಿರಬಹುದು, ಇದರಿಂದ ಯಾಕೆ ಇವರಿಗೆ ಇಷ್ಟೊಂದು ಸಂತೋಷ ಅಂತ. ನೆರೆದಿದ್ದ ಜನರ ಕುತೂಹಲ ತಣಿಸಲು ಹೆಣ್ಣಿನ ತಂದೆ ಎಲ್ಲರನ್ನೂ ಉದ್ದೇಶಿಸಿ ಹೇಳಿದರು. ಸ್ನೇಹಿತರೇ, ಕಡೆಗೂ ನನ್ನ ಮಗಳು ನನ್ನ ಕ್ರೆಡಿಟ್ ಕಾರ್ಡನ್ನು ನನಗೆ ಹಿಂದಿರುಗಿಸಿದ್ದಾಳೆ. ಎಲ್ಲರೂ ಸಂತಸದಿಂದ ಚಪ್ಪಾಳೆ ತಟ್ಟಿದರು. ಆ ಗುಂಪಿನಲ್ಲಿ ಪೆಚ್ಚಾಗಿದ್ದವನು ಒಬ್ಬನೇ, ಅವನು ಮದುವೆಯಾದ ಗಂಡು ಅಂತ ಬೇರೆ ಹೇಳಬೇಕಾಗಿಲ್ಲ.

**RAMAIAH**
**Indic Specialty Ayurveda**

**RESTORATION HOSPITAL**

# Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures

Proud to Announce
**NABH Accrediation**



Under the Leadership of
**Prof. Dr. G.G. Gangadharan**

# World Renowned Doctors



First Franchise
Bannerghatta




First Joint Venture
Penang, Malaysia




First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೇ?

ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA
ON MODERN METHODS OF ANALYSIS FOR FOOD / DRUG / ENVIRONMENT
FOR GRADUATES & POST-GRADUATES IN SCIENCE, ENGG, PHARMACY,
BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

# ಇರುವೆ ನೀನೆಲ್ಲೆಲ್ಲೂ ಇರುವೆ

• ರಘುನಂದನ, ಮೈಸೂರು

ಹೊರದೇಶದಲ್ಲಿರುವ ನನ್ನ ತಮ್ಮನ ಮಗ ತನ್ನ ಊರು, ಮನೆ, ಪರಿಸರ, ಕಾಲೇಜು, ಶಿಕ್ಷಕರು, ಸಹಪಾಠಿಗಳು ಇವುಗಳೆಲ್ಲದರ ಬಗೆಗೆ ಆಗಿಂದಾಗ್ಗೆ ನಮಗೆ ತಿಳಿಸಿ ಬರೆಯುತ್ತಿರುತ್ತಾನೆ. ಹಾಗೆಯೇ ಈಚೆಗೊಮ್ಮೆ ಬರೆದಾಗ ತನ್ನ ಸ್ನೇಹಿತನೊಬ್ಬನ ವಿಚಾರ ತಿಳಿಸಿದ. ಅವನ ಸ್ನೇಹಿತ ತನ್ನ ಕೋಣೆಯಲ್ಲಿ ಒಂದು ಗಾಜಿನ ಪೆಟ್ಟಿಗೆಯಲ್ಲಿ ಇರುವೆಗಳನ್ನು ಸಾಕುತ್ತಾನಂತೆ. ಅದರ ಮೂಲಕ ಆ ಇರುವೆಗಳು ಬದುಕುವ ರೀತಿ, ಅವುಗಳು ಗೂಡು ಕಟ್ಟುವ ಕೌಶಲ್ಯ, ರಾಣಿ ಮತ್ತಿತರ ಇರುವೆಗಳ ನಡವಳಿಕೆ, ಆಹಾರ ಪದ್ಧತಿ ಇವುಗಳನ್ನೆಲ್ಲಾ ಅಭ್ಯಾಸ ಮಾಡುವುದು ಅವನ ಸ್ನೇಹಿತನ ಹವ್ಯಾಸವಂತೆ.

ಇದನ್ನು ಓದಿದ ನನ್ನ ತಮ್ಮನ ತಮಾಷೆಯ ಪ್ರತಿಕ್ರಿಯೆ ಹೀಗಿತ್ತು.

ನಾವು ಶಾಂತಿನಗರದಲ್ಲಿ (ಬೆಂಗಳೂರಿನಲ್ಲಿ ನಾವಿದ್ದ ಮನೆ) ವಸತಿಗೆ ಹೋದಾಗ, ಇರುವೆಗಳು ತಮ್ಮ ಬಡಾವಣೆಯ ಮಧ್ಯೆ ನಮಗೆ ಮನೆ ಕಟ್ಟಲು ಅವಕಾಶಕೊಟ್ಟು, ನಾವು ಮನೆ ಕಟ್ಟುವ ಪದ್ಧತಿ, ನಮ್ಮ ರೀತಿ ನೀತಿಗಳು ಮತ್ತು ನಮ್ಮ ನಡವಳಿಕೆಯನ್ನು ಅಭ್ಯಾಸ ಮಾಡುತ್ತಿದ್ದವು. ಆ ಬಡಾವಣೆಯ ಮೂರು ಕೋನಗಳಲ್ಲಿ ಬಿಳಿ, ಕೆಂಪು ಮತ್ತು ಕಪ್ಪು ಇರುವೆಗಳು ತಮ್ಮ ತಮ್ಮ ಸಾಮ್ರಾಜ್ಯ ಕಟ್ಟಿಕೊಂಡಿದ್ದವು.

ನನ್ನ ತಮ್ಮ ತಮಾಷೆಗೆಂದು ಹಾಗೆ ಬರೆದಿದ್ದರೂ ಅದು ಹೆಚ್ಚುಕಮ್ಮಿ ನಿಜವೇ ಆಗಿತ್ತು. ಹಿಂದೆ ಹೊಲವಾಗಿದ್ದ ಪ್ರದೇಶವನ್ನು ಬಡಾವಣೆಯನ್ನಾಗಿ ಮಾಡಿ ಅಲ್ಲಿ ಮನೆಗಳು ಕಟ್ಟಲು ಪರವಾನಗಿ ಕೊಟ್ಟಿದ್ದ ಜಾಗ ಅದು. ಅಲ್ಲಿ ಮನೆಕಟ್ಟಿದ ಮೊದಲಿಗರಲ್ಲಿ ನಾವೊಬ್ಬರು. ಮನೆಯ ಸುತ್ತಲೂ ಇನ್ನೂ ಹೊಲಗಳ ಅವಶೇಷ ಉಳಿದಿತ್ತು. ಮಧ್ಯೆ ಮಧ್ಯೆ ಹತ್ತಾರು ದೊಡ್ಡ ದೊಡ್ಡ ಹುತ್ತಗಳೂ ಇದ್ದವು. ಅಂದ ಮೇಲೆ ಅದು ನಿಜವಾಗಿ ಇರುವೆಗಳ ಸಾಮ್ರಾಜ್ಯವೇ.

ನಮ್ಮ ಮನೆಯ ಅಡಿಪಾಯ ಮಾತ್ರ ಸಿಮೆಂಟಿನಿಂದ ಕಟ್ಟಿದ್ದು. ಇಟ್ಟಿಗೆಯ ಗೋಡೆಗಳು ಮಣ್ಣಿನಿಂದಲೇ ಜೋಡಿಸಲ್ಪಟ್ಟಿದ್ದವು. ನಮ್ಮ ಮನೆಯ ಕೆಳಗೇ ಇರುವೆಗಳ ಕಾಲೋನಿ ಇತ್ತೋ ಏನೋ. ನಾವು ಆ ಮನೆ ಸೇರಿದ ಕೆಲವೇ ದಿನಗಳೊಳಗೆ ಇರುವೆಗಳು ವಾಸದ ಕೋಣೆಯ ಗೋಡೆಯ ತುಂಬೆಲ್ಲಾ ಸಣ್ಣ ಸಣ್ಣ ತೂತುಗಳನ್ನು ಮಾಡಿ ಅದರಿಂದ ಹೊರಗೆ ಒಳಗೆ ಓಡಾಡುತ್ತಿದ್ದವು. ಅದರಿಂದಲೇ ನನ್ನ ತಮ್ಮ ಇರುವೆಗಳು ನಮ್ಮ ನಡವಳಿಕೆಯನ್ನು ಅಭ್ಯಾಸಮಾಡುತ್ತಿದ್ದವು ಎಂದದ್ದು. ನಮ್ಮ ಮನೆಯಲ್ಲೋ ಆಗ ಕುರ್ಚಿ ಸೋಫಾಗಳಿರಲಿಲ್ಲ. ನಮ್ಮ ಹಾಲಿನಲ್ಲಿ – ಲಿವಿಂಗ್ ರೂಮ್ – ಒಂದು ಚಾಪೆ ಹಾಸಿರುತ್ತಿದ್ದೆವು. ಯಾರು ಬಂದರೂ ಅದರ ಮೇಲೆಯೇ ಕೂಡುವುದು. ಹಾಗೆ ಯಾರಾದರೂ ಬಂದು ಕೂತು ಬೆನ್ನನ್ನು ಗೋಡೆಗೆ ಒರಗಿಸಿದರೆ ನಿಮಿಷಾರ್ಧದಲ್ಲಿ ಇರುವೆಗಳು ಅವರ ಬೆನ್ನು ಕತ್ತನ್ನೆಲ್ಲಾ ಆವರಿಸಿ ಕಚ್ಚುತ್ತಿದ್ದವು.

ಇರುವೆಗಳನ್ನು ನಿವಾರಿಸಲೆಂದು ನಮ್ಮ ಸೋದರತ್ತೆ, ಬಹಳ ಸಣ್ಣ ವಯಸ್ಸಿನಲ್ಲೇ ತಮ್ಮ ಪತಿಯನ್ನು ಕಳೆದುಕೊಂಡು ನಮ್ಮೊಡನಿದ್ದವರು, ಆ ತೂತುಗಳಿಗೆಲ್ಲಾ ಸೀಮೆಎಣ್ಣೆ ಹಾಕುತ್ತಿದ್ದರು. ಒಮ್ಮೆ ಸೀಮೆಎಣ್ಣೆ ಬಿದ್ದರೆ ಹಲವಾರು ದಿನಗಳ ಕಾಲ ಇರುವೆಗಳು ಅಲ್ಲಿ ಸುಳಿಯುತ್ತಿರಲಿಲ್ಲ.

ಆದರೆ ಆ ಕಾಲ ಸೀಮೆಎಣ್ಣೆಯ ರೇಷನ್ನಿನ ಕಾಲ. ನಮಗೆ ನಿಗದಿಯಾಗಿದ್ದ ಸೀಮೆಎಣ್ಣೆಯ ಪ್ರಮಾಣ ನಮ್ಮ ಮನೆಯ ಅಡಿಗೆ ಒಲೆಗೇ ಸಾಲುತ್ತಿರಲಿಲ್ಲ. ಜತೆಗೆ ಆ ಎಣ್ಣೆ ನಮಗೆ ಬೇಕೆಂದಾಗ ಸಿಕ್ಕುತ್ತಿರಲಿಲ್ಲ. ರೇಷನ್ನಿನಲ್ಲಿ ಕೊಡುತ್ತಿದ್ದ ಎಣ್ಣೆಯನ್ನು ಸೀಮೆಎಣ್ಣೆ ಗಾಡಿ ರೇಷನ್ನಿನ ಅಂಗಡಿ ಮುಂದೆ ಬಂದಾಗ ಕ್ಯೂ ನಿಂತು ಕೊಳ್ಳಬೇಕಿತ್ತು. ಗಾಡಿ ಯಾವಾಗ ಬರುತ್ತದೆಂಬುದು ಯಾರಿಗೂ ಗೊತ್ತಿರುತ್ತಿರಲಿಲ್ಲ. ರೇಷನ್ ಅಂಗಡಿಯ ಶೆಟ್ಟಿ ಅದನ್ನು ತಿಳಿದುಕೊಂಡಿರುತ್ತಿದ್ದ. ಆದರೆ ಅವನ ಅಂಗಡಿಗೆ ಬರಿಯ ರೇಷನ್‌ಗಾಗಿ ಮಾತ್ರ ಹೋಗುತ್ತಿದ್ದ ನಮಗೆ ಅದನ್ನು ತಿಳಿಸುತ್ತಿರಲಿಲ್ಲ. ಸೀಮೆಎಣ್ಣೆಯ ಗಾಡಿಯ ಬಗ್ಗೆ ಸುದ್ದಿ ಬೇಕಾದರೆ ಮನೆಗೆ ಬೇಕಾದ ಇತರೇ ಸಾಮಾನುಗಳೆಲ್ಲವನ್ನೂ ಅವನ ಬಳಿಯೇ ಕೊಳ್ಳಬೇಕಿತ್ತು! ಅವನ ಬಳಿ ಮನೆ ಸಾಮಾನು ಕೊಂಡರೆ ಅವನು ನಮ್ಮ ಸೀಮೆಎಣ್ಣೆ ಡಬ್ಬವನ್ನು ತನ್ನೊಡನೆ ಇಟ್ಟುಕೊಂಡಿದ್ದು, ಗಾಡಿ ಬರುವ ಹೊತ್ತಿನಲ್ಲಿ ಅವನ ಅಂಗಡಿಯ ಮುಂದೆ ಮೂಡುತ್ತಿದ್ದ ಡಬ್ಬಗಳ ಸಾಲಿನಲ್ಲಿ ಮುಂದೆ ಇಟ್ಟಿರುತ್ತಿದ್ದ.

ಆದರೆ ಅವನ ಅಂಗಡಿಯ ಬೇಳೆಯಲ್ಲಿ ಹುಳ, ಅಕ್ಕಿ ಮುಗ್ಗಲು ವಾಸನೆ, ಬೆಲ್ಲ ಅಂಟು ಎಂದೆಲ್ಲಾ ಅಮ್ಮ ತಗಾದೆ ಮಾಡಿ ಅವನ ಬಳಿ ನಮ್ಮ ಮನೆಸಾಮಾನು ಕೊಳ್ಳುತ್ತಿರಲಿಲ್ಲ. ಹಾಗಾಗಿ ನಾವು ಅತ್ತಿತ್ತ ಓಡಾಡುವಾಗ, ಶಾಲೆಗೆ ಹೋಗುವಾಗ, ಬರುವಾಗ ಅಂಗಡಿಯ ಮೇಲೆ ಕಣ್ಣಿಟ್ಟಿದ್ದು ಅಲ್ಲಿ ಡಬ್ಬಗಳ ಸಾಲು ಶುರುವಾಗುವ ಸುಳಿವು ಕಂಡಾಕ್ಷಣ ಡಬ್ಬ ಇಟ್ಟು, ಗಾಡಿ ಬರುವವರೆಗೂ ಕಾವಲು ನಿಂತು ಎಣ್ಣೆ ಕೊಳ್ಳಬೇಕಿತ್ತು. ನಾವು ಅಲ್ಲಿ ಡಬ್ಬ ಇಟ್ಟು ಮನೆಗೆ ಬಂದರೆ ಮತ್ತೊಮ್ಮೆ ಹೋಗುವ ಹೊತ್ತಿಗೆ ನಮ್ಮ ಡಬ್ಬ ಸಾಲಿನ ಕೊನೆಯಲ್ಲಿರುತ್ತಿತ್ತು!

ಸೀಮೆಎಣ್ಣೆಗೆ ಹೀಗೆ ಪರದಾಟವಾದ್ದರಿಂದ ನಮ್ಮ ಅತ್ತೆ ಇರುವೆಗಳ ತೂತಿಗೆ ಸುಣ್ಣ ತುಂಬಲು ಪ್ರಾರಂಭಿಸಿದರು. ಸದಾ ಒಂದು ತೆಂಗಿನ ಕರಟದಲ್ಲಿ ಸುಣ್ಣ ಕಲಸಿ ತಯಾರಿರುತ್ತಿತ್ತು. ಗೋಡೆಯಲ್ಲಿ ತೂತು ಕಂಡಾಕ್ಷಣ ಅತ್ತೆ ಅದಕ್ಕೆ ಸುಣ್ಣ ತುಂಬಿ ಮುಚ್ಚುತ್ತಿದ್ದರು. ಆದರೇನು? ಮಾರನೆಯ ದಿನ ಅಲ್ಲಿ ಮತ್ತೆ ತೂತಾಗಿ ಇರುವೆಗಳು ಸಾಲಿಟ್ಟಿರುತ್ತಿದ್ದವು. ಹಾಗಾಗಿ ಇರುವೆಗಳಿಗೂ ನಮ್ಮತ್ತೆಗೂ ಸದಾ ಮುಗಿಯದ ಸ್ಪರ್ಧೆ.

ಇರುವೆಗಳಿಗೆ ನಮ್ಮ ಮನೆಯ ಎಲ್ಲ ಜಾಗಗಳಿಗಿಂತ ಬಹಳ ಇಷ್ಟವಾದ ಜಾಗ ನಮ್ಮ ನೀರೊಲೆ. ಬಚ್ಚಲು ಮನೆಯ ಒಂದು ಮೂಲೆಯಲ್ಲಿ ದೊಡ್ಡ ತಾಮ್ರದ ಹಂಡೆಯೊಂದನ್ನು ಇರಿಸಿ ಸುತ್ತಲೂ ಕಟ್ಟೆ ಕಟ್ಟಿ ಅದರ ಬುಡದಲ್ಲಿ ಸೌದೆಯೊಟ್ಟಿ ಬೆಂಕಿ ಹಾಕಲು ಅನುವುಮಾಡಲಾಗಿತ್ತು. ದಿನಾ ರಾತ್ರಿ ಹಂಡೆಗೆ ನೀರು ತುಂಬಿ ಬೆಳಗ್ಗೆ ಎದ್ದಾಕ್ಷಣ ಒಲೆಗೆ ಸೌದೆ ತುಂಬಿ ಉರಿಹಾಕುತ್ತಿದ್ದವು. ಆ ಒಲೆಯೊಳಗೆ ಕೆಂಪಿರುವೆಗಳು ಗೂಡು ಮಾಡಿಕೊಂಡಿದ್ದವು. ಒಲೆಗೆ ಸೌದೆ ಒಟ್ಟುವಾಗ ಎಚ್ಚರ ಇಲ್ಲದಿದ್ದರೆ ನಮ್ಮ ಕೈಗೆಲ್ಲಾ ಕೆಂಪಿರುವೆ ಹತ್ತಿಕೊಂಡು ಒಲೆಯ ಬದಲು ನಮ್ಮ ಮೈಯಲ್ಲಿ ಉರಿಯೇಳುತ್ತಿತ್ತು!

ಚಳಿಗಾಲದಲ್ಲಿ ಈ ನೀರೊಲೆಯ ಮುಂದೆ ಕೂತು ಮೈಕಾಯಿಸುವುದು ಒಂದು ಬಹಳ ಹಿತವಾದ ಅನುಭವ. ಬೆಳಗ್ಗೆ ಎದ್ದ ತಕ್ಷಣ ಬಚ್ಚಲು ಮನೆಯಲ್ಲಿ ಒಲೆಯ ಮುಂದೆ ಕೂತರೆ ಎದ್ದು ಹೊರಹೋಗುವ ಮನಸ್ಸೇ ಬರುತ್ತಿರಲಿಲ್ಲ. ಎಲ್ಲರ ಸ್ನಾನವಾದ ಮೇಲೆ ಒಲೆಯಲ್ಲಿ ಉಳಿದ ಬೂದಿಯಲ್ಲಿ ಒಂದೆರಡು ಈರುಳ್ಳಿ ಆಲೂಗಡ್ಡೆಗಳನ್ನು ಹಾಕಿ ಮುಚ್ಚುತ್ತಿದ್ದೆವು. ಒಂದರ್ಧ ಘಂಟೆಯನಂತರ ಅವುಗಳನ್ನು ಹೊರತೆಗೆದು ಸುಟ್ಟ ಸಿಪ್ಪೆ ಸುಲಿದು ತಿನ್ನುವುದು ಅದೆಂಥ ರುಚಿಯೋ!

ಇರುವೆಗಳಿಂದ ಶುರುವಾದ ಬರಹ ಎತ್ತಲೋ ಹೋಯಿತು. ನಮ್ಮ ಮನೆಕಟ್ಟಿದ ಮೊದಮೊದಲಲ್ಲಿ ನಮಗೆ ಕಾಣುತ್ತಿದ್ದ ಕರಿ, ಕೆಂಪು ಇರುವೆಗಳ ಜತೆ ಬಿಳಿ ಇರುವೆಗಳು – ಗೆದ್ದಲು – ಕಂಡಾಗ ನಮ್ಮ ತಂದೆಯವರಿಗೆ ಬಹಳವೇ ಘಾಬರಿಯಾಯಿತು. ಗೆದ್ದಲು ನಮ್ಮ ಮನೆಗೇನೂ ಹತ್ತಿರಲಿಲ್ಲ. ನಮ್ಮ ಮನೆ ಮುಂದಿದ್ದ ಸೀಬೆ ಗಿಡದ ಕಾಂಡದಲ್ಲಿ ಒಣಗಿದ್ದ ಒಂದು ಕೊಂಬೆಯ ಮೇಲೆ ಗೆದ್ದಲಿನ ಗೂಡು ಕಾಣಿಸಿಕೊಂಡಿತ್ತು. ತಂದೆಯವರು ತಕ್ಷಣ ಅದನ್ನು ಕೆರೆದು ಹಾಕಿ ಅಲ್ಲಿ ಸುತ್ತಲೂ ಅಗೆದು ಡಿ.ಡಿ.ಟಿ. ಪುಡಿ ಹಾಕಿದರು. ಆದರೇನು? ಕೆಲವೇ ದಿನಗಳಲ್ಲಿ ಗೆದ್ದಲು ಮತ್ತೊಂದೆಡೆ ಕಂಡಿತ್ತು. ಮತ್ತೆ ಅದೇ ಕೆಲಸ. ಅಗೆತ ಮತ್ತು ಡಿ.ಡಿ.ಟಿ. ನಮ್ಮ ಅತ್ತೆಯವರಿಗೆ ಮನೆಯೊಳಗಿನ ಇರುವೆಗಳೊಡನೆ ಹೋರಾಟವಾದರೆ ತಂದೆಯವರಿಗೆ ಹೊರಗೆ ಗೆದ್ದಲುಗಳೊಡನೆ ಕಾದಾಟ. ಸಾಲಮಾಡಿ ಜಾಗಕೊಂಡು, ಸಾಲಮಾಡಿ ಕಟ್ಟಿದ್ದ ಮನೆ. ಮಣ್ಣಿನ ಗೋಡೆ. ಇನ್ನೂ ಹದಿನೈದು ವರುಷ ಕಂತು ತೀರಿಸಬೇಕಿರುವಾಗ ಗೆದ್ದಲುಹತ್ತಿ ಗೋಡೆ ಬಾಗಿಲು ಬಿದ್ದರೆ ಗತಿಯೇನು ಎಂಬುದು ಅವರ ಚಿಂತೆ. ಆ ಆತಂಕ ನಮಗೆ ಆಗ ಅರ್ಥವಾಗುತ್ತಿರಲಿಲ್ಲ.

ತಿಳಿದವರು ಕೆಲವರನ್ನು ಕೇಳಿ ತಂದೆಯವರು ಮನೆಯ ಸುತ್ತಲೂ ಮೂರು ಅಡಿ ಅಗಲ, ಆರು ಆಡಿ ಆಳದ ಕಂದಕ ಅಗೆಸಿದರು. ಕಂದಕದ ಬುಡದಲ್ಲಿ ಯಾವುಯಾವುದೋ ಕೀಟನಾಶಕಗಳನ್ನು ಬೆರೆಸಿ ಹರಡಿ, ಕಂದಕವನ್ನು ಮರಳಿನಿಂದ ತುಂಬಿ ಮುಚ್ಚಿಸಿದರು. ಆ ಕೆಲಸ ನಡೆಯುತ್ತಿರುವಾಗ ನಮಗೆ ಆಟವಾಡಲು ಮರಳುರಾಶಿ, ನೋಡಿ ಕೌತುಕಪಡಲು ಗೆದ್ದಲುಗೂಡು, ರಾಣಿಗೆದ್ದಲು ಮತ್ತು ಮನೆಯಿಂದ ಹೊರಗೆ ಒಳಗೆ ಓಡಾಡಲು ಇಟ್ಟಿದ್ದ ಹಲಗೆಗಳ ಸೇತುವೆಯ ಮೇಲೆ ಪದೇಪದೇ ನಡೆದಾಡುವ ಸಂಭ್ರಮ! ಒಟ್ಟಿನಲ್ಲಿ ಆ ಕೆಲಸ ಮುಗಿದನಂತರ ಐವತ್ತು ವರುಷ ನಾವು ಆ ಮನೆಯಲ್ಲಿದ್ದೆವು. ಗೆದ್ದಲು ಮತ್ತೆ ಕಾಣಬರಲಿಲ್ಲ. ಇರುವೆಗಳ ಕಾಟವೂ ಕೊಂಚ ಕಡಿಮೆಯಾಯಿತು.

ಈಗ ನಾವಿರುವುದು ಸಿಮೆಂಟಿನಿಂದ ಕಟ್ಟಿದ ಮನೆ. ನಮ್ಮ ಕಿಟಕಿಗಳೆಲ್ಲಾ ಅಲ್ಯೂಮಿನಿಯಂ ಲೋಹದ್ದು. ಗೆದ್ದಲಿನ ಭಯವಿಲ್ಲ. ಆದರೆ ಇರುವೆಗಳು ನಮ್ಮನ್ನು ಕಾಡುವುದು ತಪ್ಪಿಲ್ಲ. ಯಾವುದೇ ತಿಂಡಿ ಪದಾರ್ಥ ಅಪ್ಪಿತಪ್ಪಿ ಮುಚ್ಚಳ ಘಟ್ಟಿಯಾಗಿ ಮುಚ್ಚದೆ ಇಟ್ಟಿದ್ದರೆ ಇರುವೆ ಸಾಲಿಡುವುದು ಖಂಡಿತ. ಈಗ ಅವುಗಳೊಡನೆ ಕಾದಾಡುವ ಜವಾಬ್ದಾರಿ ನನ್ನ ಪತ್ನಿಯದು. ಅಡಿಗೆ ಮನೆಯ ಬಡುಗಳನ್ನೆಲ್ಲಾ ಆಕೆ ಪದೇಪದೇ ಒದ್ದೆ ಬಟ್ಟೆಯಿಂದ ಒರೆಸಿಡುತ್ತಾಳೆ. ಇರುವೆಗಳನ್ನು ದೂರವಿಡುವವೆಂದು ಹೆಸರಾದ ರಾಮರೇಖೆ, ಲಕ್ಷ್ಮಣ ರೇಖೆ ಮುಂತಾಗಿ ಹೆಸರಿರುವ ಸೀಮೆಸುಣ್ಣದಂಥ ಕಡ್ಡಿಗಳನ್ನು ತಂದು ಬಡುಗಳ ಅಂಚುಗಳಲ್ಲಿ ಗೆರೆಯೆಳೆಯುತ್ತಾಳೆ. ಕೀಟನಾಶಕ ಪುಡಿ ಉದುರಿಸುತ್ತಾಳೆ. ಆದರೆ ಇರುವೆಗಳು ಅದು ಹೇಗೋ ಅದೆಲ್ಲವನ್ನು ನಿವಾರಿಸಿಕೊಂಡು ಡಬ್ಬಗಳಿಗೆ ದಾಳಿಯಿಡುತ್ತವೆ. ಪ್ಲಾಸ್ಟಿಕ್‌ನ ಡಬ್ಬವನ್ನೇ ತೂತುಕೊರೆದು ಒಳನುಗ್ಗುತ್ತವೆ. ಬೇಸಗೆಯಲ್ಲಂತೂ ಅವುಗಳ ಕಾಟ ಹೇಳತೀರದು. ಕೊನೆಗೆ ನನ್ನ ಪತ್ನಿ ನಮ್ಮ ಡೈನಿಂಗ್ ಟೇಬಲಿನ ನಾಲ್ಕು ಕಾಲುಗಳ ತಳಕ್ಕೆ ನಾಲ್ಕು ಬಟ್ಟಲುಗಳನ್ನಿಟ್ಟು ಅದರಲ್ಲಿ ನೀರು ತುಂಬಿ, ಟೇಬಲ್ಲಿನ ಮೇಲೆ ತಿಂಡಿ ಪದಾರ್ಥಗಳನ್ನಿಟ್ಟು ಈಗ ಇವು ಏನು ಮಾಡುತ್ತವೋ ನೋಡುತ್ತೇನೆ. ಈ ಇರುವೆಗಳು ಏನು ಮಾಡಿದರೂ ನೀರಿನಲ್ಲಿ ಈಜಿಕೊಂಡು ಬರುವ ವಿದ್ಯೆಯನ್ನಂತೂ ಇನ್ನೂ ಕಲಿಯಲಿಲ್ಲ ಎಂದು ಇರುವೆಗಳಿಗೆ ಸವಾಲೆಸೆದಳು. ಇರುವೆಗಳು ಸೋಲೊಪ್ಪಿಕೊಂಡವೆನಿಸುತ್ತದೆ. ಅದಾಗಿ ಹದಿನೈದು ದಿನವಾದರೂ ಮೇಜಿನ ಮೇಲೆ ಇರುವೆಗಳು ಕಾಣಲಿಲ್ಲ. ನನ್ನ ಪತ್ನಿ ತಾನು ಗೆದ್ದೆನೆಂದು ಬೀಗಿದಳು.

ತಿಂಗಳುಗಳಿಂದ ಸಿಹಿತಿಂಡಿ ಮಾಡದೇ ಹೆದರಿಕೊಂಡಿದ್ದವಳು ನನ್ನ ಮಗನ ಹುಟ್ಟು

ಹಬ್ಬಕ್ಕೆಂದು ಗುಲಾಬ್ ಜಾಮೂನ್ ಮಾಡಿ ಧೈರ್ಯವಾಗಿ ಮೇಜಿನ ಮೇಲಿಟ್ಟು ರಾತ್ರಿ ನಿರಾಳವಾಗಿ ನಿದ್ದೆ ಮಾಡಿದಳು. ಮಾರನೇ ದಿವಸ ಮುಂಜಾನೆ ಎದ್ದು ನೋಡಿದರೆ ಆಘಾತ! ಮೇಜಿನ ಮೇಲೆ ಜಾಮೂನಿನ ಬೋಗುಣಿಯೇ ಕಾಣದಂತೆ ಇರುವೆಗಳು ಮುತ್ತಿಕೊಂಡಿದ್ದವು. ನನ್ನಾಕೆಯನ್ನು ಸುಧಾರಿಸಲು ನನಗೆ ಅರ್ಧದಿನ ಬೇಕಾಯಿತು. ಇಂಗ್ಲಿಷಿನಲ್ಲಿ ಟ್ಯಾಕ್ಟಿಕಲ್ ರಿಟ್ರೀಟ್ ಎಂಬ ಪದವಿದೆ. ಯುದ್ಧ ಭೂಮಿಯಿಂದ ಕೊಂಚ ಹಿಮ್ಮೆಟ್ಟಿ ಅವಕಾಶಕ್ಕಾಗಿ ಕಾಯುವುದು. ಇರುವೆಗಳು ಹಾಗೆ ಕಾದಿದ್ದವೇನೋ. ನನ್ನಾಕೆ ತಾನು ಗೆದ್ದೆನೆಂಬ ಧೈರ್ಯದಿಂದ ಜಾಮೂನು ಮಾಡಿ ಮೇಜಿನ ಮೇಲಿಟ್ಟು, ತನ್ನ ಸ್ನೇಹಿತೆಗೆ ಆ ಬಗ್ಗೆ ಮೊಬೈಲಿನಿಂದ ಮೆಸೇಜ್ ಕಳುಹಿಸಿ, ಮೊಬೈಲನ್ನು ಚಾರ್ಜುಮಾಡಲೆಂದು ಮೇಜಿನ ಮೇಲೆಯೇ ಇಟ್ಟು ಚಾರ್ಜರ್ ಅನ್ನು ಮೇಜಿನ ಪಕ್ಕದ ಪ್ಲಗ್ ಪಾಯಿಂಟಿಗೆ ತಗುಲಿಸಿ ಹೋಗಿದ್ದಳು. ಸಮಯ ಕಾದಿದ್ದ ಇರುವೆಗಳು ಗೋಡೆಹತ್ತಿ, ಪ್ಲಗ್ ಪಾಯಿಂಟ್ ತಲುಪಿ, ಚಾರ್ಜರಿನ ತಂತಿಯ ಮೇಲಿಂದ ಮೊಬೈಲಿಗಿಳಿದು, ಮೇಜನ್ನು ಆಕ್ರಮಿಸಿಕೊಂಡವು! ಈ ಮಾನವರು ಏನೇ ಮಾಡಿದರು ಒಂದಲ್ಲ ಒಂದು ಕಡೆ ಎಚ್ಚರ ಕಳೆದುಕೊಳ್ಳುತ್ತಾರೆಂದು ಅವಕ್ಕೆ ತಿಳಿಯದೇ?

ನಾವು ಇರುವೆಗಳನ್ನು ಪೆಟ್ಟಿಗೆಯಲ್ಲಿಟ್ಟು ಅವುಗಳ ಜೀವನ ಕ್ರಮವನ್ನು ನೋಡಿ ಕಲಿಯತೊಡಗಿದ್ದೇವೆ. ಅವುಗಳ ಗೂಡುಗಳಲ್ಲಿ ಸಣ್ಣ ಸಣ್ಣ ಕ್ಯಾಮರಾಗಳನ್ನು ಅಳವಡಿಸಿ ಅವು ಬಾಳುವ ರೀತಿಯನ್ನು ಅಭ್ಯಾಸಮಾಡುತ್ತೇವೆ. ಆದರೆ ನೋಡಿ, ನಾವು ಮಾನವರು ಈ ಭೂಮಿಯ ಮೇಲೆ ಕಾಣಿಸಿಕೊಂಡದ್ದು ಎರಡು ಲಕ್ಷ ವರುಷಗಳ ಹಿಂದೆ ಎಂದು ಅಂದಾಜು. ಇರುವೆಗಳು ಭೂಮಿಯ ಮೇಲೆ ಕಾಣಿಸಿಕೊಂಡದ್ದು ತೊಂಭತ್ತೆರಡು ದಶಲಕ್ಷ ವರುಷಗಳಿಗೂ ಮೊದಲಂತೆ! ನಾವು ಅವುಗಳ ಜೀವನವನ್ನು ಈಚೆಗೆ, ಇಪ್ಪತ್ತೋ, ಮೂವತ್ತೋ, ಐವತ್ತೋ ವರುಷಗಳಿಂದ ಅಭ್ಯಾಸ ಮಾಡುತ್ತಿದ್ದೇವೆ. ಅವು ನಮ್ಮನ್ನು, ನಾವು ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದ, ಅಂದರೆ ಎರಡು ಲಕ್ಷ ವರುಷಗಳಿಂದ ನೋಡುತ್ತಿವೆ! ನಾವು ಅವುಗಳಿಗೆ ಸಾಟಿಯೇ? ■

---



TEMPLE
OF
KNOWLEDGE

DISTANCE EDUCATION
(Govt. & UGC Recognised Universities)

# BEECHI VIDYA KENDRA

## ADMISSION OPEN - APPLY NOW

## CENTER OF DISTANCE LEARNING

**MBA WITH 6 SPECIALIZATIONS, MA, M.COM, MCA, MSc-BT, PGDCS, BA & B.COM - AGE BASIS**

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE
OF
KNOWLEDGE

Email : admin@beechi.in
Web : www.becchi.in
Mob. 9740968677

- ದಂನಆ

- ✓ ನಿಮಗೊಬ್ಬ ಒಳ್ಳೇ ಗುರು ಸಿಗಬಹುದು ಆದರೆ ನೀವೊಬ್ಬ ಒಳ್ಳೇ ಶಿಷ್ಯರೆ?
- ✓ ವಿಧಾನ ಸಭೆಯಲ್ಲಿ ಚರ್ಚೆಗೆ ಬರ ಇಲ್ಲ, ಆದರೆ ಅದು ಬರದ ಬಗ್ಗೆ ಅಲ್ಲ.
- ✓ ಬಿಜೆಪಿ ಮೆ ಹ್ಯಾವ್ ಒನ್ ಬಿಗ್ ಬ್ರದರ್ ಬಟ್ ಅಪೊಸಿಷನ್ ಹ್ಯಾಸ್ ಮೆನಿ ಬಿಗ್ ಸಿಸ್ಟರ್ಸ್.
- ✓ ರಸ್ತೆ ಚೆನ್ನಿದ್ದರೆ ಹೋಗುವ ಜಾಗದ ಬಗ್ಗೆ ಚಿಂತಿಸಿ. ಹೋಗುವ ಜಾಗ ಚೆನ್ನಾಗಿದೆ ಎಂದು ಗೊತ್ತಿದ್ದರೆ ರಸ್ತೆಯ ಬಗ್ಗೆ ಚಿಂತೆ ಮಾಡಬೇಡಿ.
- ✓ ನಾವು ಕರೆದಾಗ ದೇವರು ಬರುವುದಿಲ್ಲ ಎಂದು ದೂರುತ್ತೇವೆ. ಆದರೆ ದೇವರು ಸರಿಯಾದ ಸಮಯಕ್ಕೇ ಬರುತ್ತಾನೆ. ನಮಗೆ ಆತುರ ಅಷ್ಟೆ.
- ✓ ಡೋಂಟ್ ಫೀಲ್ ಸೊ ಹಂಬಲ್. ಯು ಆರ್ ನಾಟ್ ದಟ್ ಗ್ರೇಟ್.
- ✓ ನಮ್ಮ ಕೈಲಿ ಏನು ಮಾಡಲು ಸಾಧ್ಯ ಎಂಬುದರ ಆಧಾರದ ಮೇಲೆ ನಮ್ಮನ್ನು ನಾವು ಅಳೆಯುತ್ತೇವೆ. ನಾವು ಏನು ಈಗಾಗಲೇ ಸಾಧಿಸಿದ್ದೇವೆ ಎಂಬುದರ ಮೇಲೆ ನಮ್ಮನ್ನು ಇತರರು ಅಳೆಯುತ್ತಾರೆ.
- ✓ ಲಕ್ಷ್ಮಣ ರೇಖೆ ಇರುವುದು ಮಹಿಳೆಗೆ ಮಾತ್ರವೆ?
- ✓ ಸೊನ್ನೆ ಕಂಡು ಹಿಡಿದ ಮಹನೀಯನಿಗೆ: ಥ್ಯಾಂಕ್ಸ್ ಫಾರ್ ನಥಿಂಗ್.
- ✓ ಎ ಪಾಲಿಟೀಷಿಯನ್ ಸ್ಯಾಕ್ರಿಫೈಸಸ್ ಯುವರ್ ಲೈಫ್ ಫಾರ್ ಹಿಸ್ ಕಂಟ್ರಿ.
- ✓ ಆಡಳಿತ ಪಕ್ಷಕ್ಕೆ ಸರ್ಕಾರ ಉಳಿಸಿಕೊಳ್ಳುವ ವರಿ; ವಿರೋಧ ಪಕ್ಷಕ್ಕೆ ಸರ್ಕಾರ ಬೀಳಿಸುವದೇ ಗುರಿ. ಮತ ಹಾಕಿದವ ಮಾತ್ರ ಯಾವಾಗಲೂ ಕುರಿ.
- ✓ ಕಷ್ಟಪಟ್ಟು ಓದು; ಏನಾದರೂ ಸಾಧಿಸು, ಯಶಸ್ವಿಯಾಗು ಎಂದು ಮಕ್ಕಳಿಗೆ ಹೇಳುತ್ತೇವೆ. ಆದರೆ ಫೇಲಾಗುವುದೂ ಸಹಜ ಎಂಬುದನ್ನು ಕಲಿಸುತ್ತೇವೆಯೆ?
- ✓ ನಾವು ಎಂಜಾಯ್ ಮಾಡೋದು ನಮ್ಮ ಸುಖ ಅಲ್ಲ. ನಮ್ಮ ಸುಖ ನೋಡಿ ಇತರರು ಕರುಬುವುದನ್ನು.
- ✓ ಐ ಹ್ಯಾವ್ ದಿ ಸಿಂಪ್ಲೆಸ್ಟ್ ಟೇಸ್ಟ್. ಐ ಆ್ಯ ಅಮ್ ಅಲ್ವೇಸ್ ಸ್ಯಾಟಿಸ್‌ಫೈಡ್ ವಿತ್ ದಿ ಬೆಸ್ಟ್.
- ✓ ಇತರರೊಂದಿಗೆ ಹಂಚಿಕೊಳ್ಳಬೇಕು ಎಂದಾಗ ಅದು ಹಣ ಆಗಿರುವುದೇ ಇಲ್ಲ.
- ✓ ಬಾಳೊಂದು ಸಿನಿಮಾ. ನೀವೇ ಅದರ ಸ್ಟಾರ್. ಅದಕ್ಕೊಂದು ಸುಖಾಂತ್ಯ ಕಾಣಿಸಿ.
- ✓ ಒಂಟೆ ಬಗ್ಗದೆ ಹೋಗಿದ್ದರೆ ಅದರ ಮೇಲೆ ಸಾಮಾನು ಹೇರಲು ಆಗುತ್ತಿರಲಿಲ್ಲ.
- ✓ ದೇರ್ ಈಸ್ ನೊ ಎಲಿವೇಟರ್ ಟು ಸಕ್ಸಸ್. ಯು ಹ್ಯಾವ್ ಟು ಟೇಕ್ ಸ್ಟೆಪ್ಸ್.

# ಯುನಿವರ್ಸಲ್ ವಿಮರ್ಶೆ

• ಸೂರಿ ಹಾರ್ದಳ್ಳಿ

'ಸೂರಿಯವರೇ, ನಾನು ನೀವು ಬರೆದಿರೋ ಕತೆಗಳನ್ನ, ಹಾಸ್ಯಾಸ್ಪದ ಲೇಖನಗಳನ್ನ ಓದಿದ್ದೇನೆ. ಓದಿದ ಮೇಲೆ ನನ್ನ ಅಭಿಪ್ರಾಯ ಏನೆಂದರೆ ನೀವು ವಿಮರ್ಶೆ ಬರೆಯೋದೇ ಒಳ್ಳೆಯದು,' ಎಂದು, ಒಂದು ಮಟಮಟ ಮಧ್ಯಾಹ್ನ, ಹೇಳಿದರು ಸಂಪಾದಕರು. ಅದು ಹೊಗಳಿಕೆಯೋ, ತೆಗಳಿಕೆಯೋ ತಿಳಿಯದೇ ನಾನು ಪೆಕರ ಪೆಕರನಾಗಿ 'ಹೆ.. ಹೆ.. ಹೆ,' ಎಂದೆ.

'ನೀವು ಹಾಸ್ಯ ಲೇಖನ ಬರೆದಾಗ ಎಲ್ಲಿ ಎಲ್ಲಿ ನಗಬೇಕು ಎಂದು ಬರೆಯೋದೂ ಒಳ್ಳೆಯದು,' ಎಂದು ನನ್ನ ಆತ್ಮೀಯ ವೈರಿಯೊಬ್ಬರು ಕಮೆಂಟಿಸಿ ನನ್ನ ಮುಖಕ್ಕೆ ಮಸಿ ಬಳಿದಿದ್ದರು. ವಿನೋದ ಬರೆಹಗಾರರಿಗೆ ಇದೆಲ್ಲಾ ಮಾಮೂಲು. 'ನಗೋರ್ಮೂತಿ ನೋಡೋಕ್ ಚೆಂದ, ಅಳೋರ್ ಮೂತಿ ಕೋತಿ,' ಎಂಬಲ್ಲಿನ ಕೊನೆಯ ಮೂರು ಪದಗಳು ನನ್ನ ಮಸ್ತಿಷ್ಕದಲ್ಲಿ ಖಾಯಂ ಆಗಿ ಅಂಡೂರಿರುವುದರಿಂದ ಬಾರದಿದ್ದರೂ ಬಲವಂತವಾಗಿ ನಕ್ಕುಬಿಡುವುದು ನನ್ನ ಎಂದಿನ ಸಂಪ್ರದಾಯ. ಒಬ್ಬ ಹೆಸರಾಂತ ಬರೆಹಗಾರರಂದೂ ಒಂದು ಒಳ್ಳೆಯ ಸಲಹೆ ನೀಡಿದ್ದರು. ಅದರಂತೆ ಕನ್ನಡದಲ್ಲಿ ಖ್ಯಾತರಾಗುವ ತನಕ ಲೇಖಕರು ಏನನ್ನೂ ಬರೆಯದಿರುವುದು ಒಳ್ಳೆಯದು ಮತ್ತು ಖ್ಯಾತರಾದ ಮೇಲೆ ಏನೇ ಬರೆದರೂ ಅದನ್ನು ಮಹಾ ಪ್ರಸಾದ ಎಂಬಂತೆ ವಿಮರ್ಶಕರು ಪರಿಗಣಿಸುತ್ತಾರೆ, ಎಂದು. ತಲೆ ಕೆರೆದುಕೊಂಡಷ್ಟೇ ಬಂತು. ಒಬ್ಬ ಲೇಖಕ ಹೀಗೆಂದನಂತೆ, 'ನಾನು ಬರೆಯುವುದೆಲ್ಲಾ ಬೂಸಾ ಎಂದು ನನಗೆ ಈಗ ತಿಳಿಯಿತು. ಆದರೇನು ಮಾಡುವುದು, ನಾನು ಇದಾಗಲೇ ಪ್ರಸಿದ್ಧನಾಗಿಬಿಟ್ಟಿದ್ದೆ,' ಎಂದು.

ಇಂತಿರ್ಪ ನನಗೆ ಪುಸ್ತಕಗಳ ವಿಮರ್ಶೆ ಮಾಡುವ ಜವಾಬ್ದಾರಿಯನ್ನು ಸಂಪಾದಕ ಮಹನೀಯರು ಪ್ರಸಾದಿಸಿದ್ದರಿಂದ ನಿಜವಾಗಿಯೂ ಖುಷಿಯಾಯಿತು. ಹೀಗಾದರೂ ನಾನು ಕನ್ನಡ ಭುವನೇಶ್ವರಿಯ ಪಾದಪದ್ಮಗಳಿಗೆ ನನ್ನ ಸೇವಾಪುಷ್ಪಗಳನ್ನು ಅರ್ಪಿಸಬಹುದು ಎಂದು ಹೆಮ್ಮೆಯಾಯಿತು. ಆದರೂ ಇದು ನಾನು ಇಂದಿಗೂ ಪ್ರಯತ್ನಿಸಿ ಯಶಸ್ವಿಯಾಗದ ವಿಷಯ. ಹೇಗೆ ವಿಮರ್ಶೆ ಮಾಡಬೇಕು ಎಂದು ಒಂದಿಷ್ಟು ಸಲಹೆಯನ್ನಾದರೂ ಕೊಡಮಾಡಿ, ಎಂದೆ.

ವಿಮರ್ಶಕರು ಮತ್ತು ಕೃತಿಕರ್ತರದು ಅತ್ತೆ ಸೊಸೆಯರ ಸಂಬಂಧ. ಆಂತರಿಕವಾಗಿ ಬದ್ಧ ವೈರಿಗಳೇ ಆದರೂ ಹೊರ ತೋರಿಕೆಗಾದರೂ ಬಿಡಲಾರದ ಬಂಧವೆಂಬಂತೆ ಪರಸ್ಪರ ಅಂಟಿಕೊಂಡಂತೆ ನಟಿಸುತ್ತಾರೆ. ಸಾಹಿತಿಯಾಗಿ ಸೋತವನು ಈ ಕಾರ್ಯಕ್ಕೆ ಮುನ್ನುಗ್ಗುತ್ತಾನೆ, ತನ್ಮೂಲಕ ಓದುಗರ ಮೇಲಿನ ಕೋಪವನ್ನು ಲೇಖಕರ ಮೇಲೆ ತೋರಿಸಿಕೊಳ್ಳುತ್ತಾನೆ. ಹೆಚ್ಚು ಹೆಚ್ಚು ಖಾರವಾಗಿ, ಕಟುವಾಗಿ, ರೌದ್ರವಾಗಿ ಕಮೆಂಟಿಸಿದವನು ಜನಾನುರಾಗಿಯಲ್ಲದಿದ್ದರೂ ಜನರಿಂದ ಗುರುತಿಸಲ್ಪಡುತ್ತಾನೆ ಎಂಬುದು ನನಗೆ ತಿಳಿದಿದ್ದು ನಂತರವೇ.

'ನೋಡಿ ಸೂರಿಯವರೇ, ನೀವು ಖ್ಯಾತ ಲೇಖಕರ ಒಂದಿಷ್ಟು ಪುಸ್ತಕಗಳನ್ನು ಖರೀದಿಸಬೇಕು. ಅವುಗಳಲ್ಲಿ ಬರುವ ಉಕ್ತಿಗಳನ್ನು ಬರೆದುಕೊಳ್ಳಬೇಕು. ಸಾಧ್ಯವಾದಲ್ಲೆಲ್ಲಾ ಅವುಗಳನ್ನು ನೀವು ಬರೆಯುವ ವಿಮರ್ಶೆಗಳಲ್ಲಿ ತುಂಬಬೇಕು,' ಎಂದರು ಸಂ. ನಾನು ತಲೆ ಆಡಿಸಿದೆ. ಕೆಲವು ಪದಗಳನ್ನು ಹೇಳುತ್ತೇನೆ, ಅವುಗಳನ್ನು

ಧಾರಾಳವಾಗಿ ನಿಮ್ಮ ವಿಮರ್ಶಾ ಲೇಖನದ ಹೊಟ್ಟೆಯಲ್ಲಿ ತುಂಬಬೇಕು. ಅವೆಂದರೆ: ಮಣ್ಣಿನ ವಾಸನೆ, ರಮ್ಯ ಶಿಲ್ಪ, ನವೋದಯ, ಮನೋಧರ್ಮ, ಲಿಬಿಗೋ, ದೃಷ್ಟಾಂತ, ಸೊಗಡು, ಮೆಟಾಫಿಸಿಕಲ್, ಪುರೋಗಾಮಿ, ಸಂವಹನ, ಕಾಫ್ಕಾ, ಸ್ತ್ರೀಸಂಧಾನ, ಕಮು, ಸಾರ್ತ್ರ, ಮಾರ್ಕ್ಸ್, ಬಂಡಾಯ, ಸ್ತ್ರೀವಾದ, ವಿಚಾರವಾದ, ಲೋಹಿಯಾ, ಅನುಸಂಧಾನ, ಮುಖಾಮುಖಿ, ಸಾದೃಶ್ಯ, ಇತ್ಯಾದಿ.

'ವಿಮರ್ಶಕನು ಸದಾ ಗಂಭೀರನಾಗಿರಬೇಕು ಮತ್ತು ಅವನ ತುಟಿಯಂಚಿನಲ್ಲಿ ತಪ್ಪಿಯೂ ಕೂಡಾ ಗುಲಗಂಜಿಯಷ್ಟೂ ನಗೆ ಬರಬಾರದು. ಅವನ ಯುನಿಫಾರ್ಮ್ ಎಂದರೆ ಗಡ್ಡ, ಕೆದರಿದ ತಲೆಗೂದಲು, ದೊಗಲು ಶರಾಯಿ, ಜೇಬಿನಲ್ಲೊಂದು ಪೆನ್ನು, ಕೈಯಲ್ಲಿ ವಿಖ್ಯಾತ ಸಾಹಿತಿಯೊಬ್ಬರ ಒಂದು ದಪ್ಪದ ಪುಸ್ತಕ, ಬಗಲಿನಲ್ಲೊಂದು ತೂಗು ಚೀಲ, ಅರ್ಥವಾಗಲಿ, ಬಿಡಲಿ, ಸಾಹಿತ್ಯಿಕ ಕಾರ್ಯಕ್ರಮಗಳಿಗೆ, ಸೆಮಿನಾರುಗಳಿಗೆ, ಪುಸ್ತಕ ಬಿಡುಗಡೆಗಳಿಗೆ ತಪ್ಪದೇ ಹಾಜರಾಗುವುದು. ಅವರು ಒಂದು ಥರಾ ಪರೋಪಜೀವಿಗಳು. ಲೇಖಕರು/ಬರೆಹಗಾರರೇ ಅವರ ಊಟ–ತಿಂಡಿ–ವೈನು. ವಿಮರ್ಶೆಯಿಂದ ಸಾಹಿತ್ಯಿಕ ಕ್ರಾಂತಿ ನಡೆಯುತ್ತದೆ ಎಂದು ಸದಾ ನಂಬಿರುತ್ತಾರೆ.

'ನಿಮಗೆ ಇನ್ನೊಂದು ಮುಖ್ಯವಾದ ವಿಷಯ ಹೇಳುತ್ತೇನೆ. ನೀವು ಪುಸ್ತಕಗಳನ್ನು ಖಂಡಿಸಬಾದರು, ಹೊಗಳಲೂ ಬಾರದು. ಎರಡೂ ಅಲ್ಲದ, ಸಾಧ್ಯವಾದರೆ ಏನು ಹೇಳುತ್ತಿದ್ದೀರೆಂದು ತಿಳಿಯದಂತೆ ಬರೆಯಬೇಕು. ನೀವು ವರಕವಿ ಬೇಂದ್ರೆಯವರ ಕವನದ ಸಾಲುಗಳನ್ನು ಓದಿರಬಹುದು, ಅದು: ಸಂಸಾರ ಸಾಗರದಾಗೆ ಲೆಕ್ಕವಿರದಷ್ಟು ದುಃಖದ ಬಂಡಿ, ಎಂಬುದು. ನಿಮಗೇನಾದರೂ ಅರ್ಥವಾಯಿತೇ?' ಕೇಳಿದರು ಸಂ. ತಲೆ ಆಡಿಸಿದೆ.

ಸಂಸಾರ, ಸಾಗರ, ಬಂಡಿ  ಒಂದಕ್ಕೊಂದು ತಾಳೆ ಇಲ್ಲ, ತಂತಿ ಇಲ್ಲ. ನಾನು ಎಷ್ಟು ಹೊತ್ತು ತಲೆ ಕೆರೆದುಕೊಂಡರೂ ಅರ್ಥವಾಗಲಿಲ್ಲ. ಕೂದಲು ಉದುರಿಸಿಕೊಂಡಿದ್ದಷ್ಟೇ ಬಂತು!

'ಹೋಗಲಿ, ಷರೀಫರ ಕವನ ಕೇಳಿದ್ದೀರಾ? ನೀರಿಲ್ಲದೆ ಜಳಕ ಮಾಡಿರಬೇಕೊ, ಅರಿವೆಯಿಲ್ಲದೆ ಮಡಿಯ ಉಟ್ಟಿರಬೇಕೊ, ಊಟವಿಲ್ಲದೆ ಹೊಟ್ಟೆ ತುಂಬಿರಬೇಕೊ, ನಿದ್ರೆಯೊಳಗೆ ಎಚ್ಚರ ಇರಬೇಕೊ  ಇದು ಅರ್ಥವಾಯಿತೇ? ಅವರದೇ ಕೋಡಗನ ಕೋಳಿ ನುಂಗಿತ್ತಾ, ಎಂಬ ಕವನ ನೀವು ಕೇಳಿರಬಹುದು. ಅದರ ಅಂತರಾರ್ಥ ತಿಳಿಯಿತೇ? ಅಲ್ಲಿಹುದು ನಮ್ಮ ಮನೆ, ಇಲ್ಲಿಹುದು ಸುಮ್ಮನೇ ಎಂಬ ದಾಸವಾಣಿ ಏನನ್ನು ಸೂಚಿಸುತ್ತದೆ? ಹೀಗೆ ಏನೇನನ್ನೋ ಬರೆದರೆ ನೀವು ಎಳಸು ಲೇಖಕರಾಗಿದ್ದರೆ ಜನ ಉಗಿಯುತ್ತಾರೆ, ಖ್ಯಾತರಾಗಿದ್ದರೆ ಗೂಢಾರ್ಥ ಏನೆಂದು ಬರೆಬರೆದು, ಬರೆದು ಪುಟಗಳನ್ನು ತುಂಬಿಸುತ್ತಾರೆ. ಇದನ್ನು ನೆನಪಿನಲ್ಲಿಟ್ಟುಕೊಂಡು ವಿಮರ್ಶೆ ಬರೆಯಬೇಕು, ತಿಳಿಯಿತೇ,' ಎಂದು ಸಲಹಿಸಿದರು ಅವರು.

'ಹೋಗಿ, ಕೆಲ ಪುಟಗಳಷ್ಟು ವಿಮರ್ಶೆ ಬರೆದುಕೊಂಡು ಬನ್ನಿ, ನೋಡೋಣ,' ಎಂದು ಕೂಡಾ ಹೇಳಿದರು.

'ಯಾವುದರ ವಿಮರ್ಶೆ ಬರೆಯಬೇಕು?' ಕೇಳಿದೆ.

'ಯುನಿವರ್ಸಲ್ ವಿಮರ್ಶೆ ಬರೆದುಕೊಂಡು ಬನ್ನಿ. ಕೃತಿಗಳು ಇದ್ದರೆ ಎಲ್ಲರೂ ಬರೆಯುತ್ತಾರೆ, ಇಲ್ಲದೇ ಬರೆಯಬೇಕು, ಅದು ಸಾರ್ವತ್ರಿಕವಾಗಿರಬೇಕು. ಇದು

ನಿಜವಾದ ಟ್ಯಾಲೆಂಟ್,' ಇದು ಸಂ. ಉವಾಚ.

'ತುಸು ಉದಾಹರಣೆ ಕೊಡುತ್ತೀರಾ?' ನಾನು ಗೋಗರೆದೆ.

'ಕೆಲ ಸಾಲುಗಳನ್ನು ಕೇಳಿ, ನಾನೇ ಬರೆದಿದ್ದು,' ಆರಂಭಿಸಿದರು ಆ ಮಹಾಶಯರು. 'ಇಪ್ಪತ್ತನೆಯ ಶತಮಾನದ ಮಧ್ಯಂತರದಲ್ಲಿ ಜಪಾನಿನಲ್ಲಿ ನಡೆದ ಸಾಹಿತ್ಯಿಕ ಕ್ರಾಂತಿಯ ಫಲಶ್ರುತಿಯಾಗಿ ನಡೆದ ಅಲ್ಲೋಲಕಲ್ಲೋಲದ ಪರಿಣಾಮವು ಭಾರತದ ಸಾರಸ್ವತ ಲೋಕದ ಮೇಲೆ ತನ್ನ ನೆರಳನ್ನು ಬೀರುತ್ತದೆ ಎಂದು ನಿರೀಕ್ಷಿಸುವುದು ಅಷ್ಟೊಂದು ಸಮರ್ಪಕವಲ್ಲವಾದರೂ ಅದರ ಹೊಳಪು, ಬಿಸುಪು, ನೆನಪು ಸಪ್ತ ಸಮುದ್ರಗಳನ್ನು ದಾಟಿ ಬರುವುದರಲ್ಲಿ ವಿಳಂಬವೇನೂ ಆಗದು ಎಂದು ಕಲ್ಪಿಸಿಕೊಂಡರೆ ಅದರ ನೆರಳು ಈ ಕೃತಿಯಲ್ಲಿ ಪಡಿಮೂಡಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಇದು ಒಂದು ಸಕಾರಾತ್ಮಕ ಬೆಳವಣಿಗೆ. ಇದರ ಪ್ರಬುದ್ಧತೆಯ ಬಗ್ಗೆ ಇಲ್ಲಿ ವಿಶ್ಲೇಷಿಸುವುದು, ಅಭ್ಯಸಿಸುವುದು ಇಲ್ಲಿ ಸೂಕ್ತವಲ್ಲವಾದರೂ ಸಾಹಿತಿಗಳಿಗೆ ಗಡಿಯ ಮಿತಿಯನ್ನು ಹೇರುವುದು ಸಮರ್ಪಕವಲ್ಲ ಎಂಬುದು ನನ್ನ ಅನಿಸಿಕೆ.'

ಇದನ್ನು ಕೇಳಿದ ನಾನು ರಾತ್ರಿಯೆಲ್ಲಾ ನಿದ್ರೆಗೆಟ್ಟು ಯೋಚಿಸಿ, ಯೋಚಿಸಿ, ಯೋಚಿಸಿ, ತಲೆ ಕೆರೆದುಕೊಂಡು, ಲೀಟರ್‌ಗಟ್ಟಲೆ ಕಾಫಿ ಹೀರಿ, ಕೆಳಗಿನದ್ದನ್ನು ಬರೆದೆ. ಅದನ್ನು ಅವರಿಗೆ ತೋರಿಸುವ ಮೊದಲು ನಿಮ್ಮ ಎದುರು ಅವಗಾಹನೆಗೆ ಇಟ್ಟಿದ್ದೇನೆ.

'ಭೂತದಲ್ಲಿ ಭವಿಷ್ಯದ, ಭವಿಷ್ಯದಲ್ಲಿ ವರ್ತಮಾನದ ಮಿಂಚುಗಳನ್ನು ಅರಸುವ ಹಪಾಹಪಿ ಭ್ರೂಣದಲ್ಲಿರುವುದನ್ನು ಬೆಳಸಿಕೊಳ್ಳಬೇಕು.'

'ರಕ್ತ ಚೆಲ್ಲಿದ ಆಗಸವನ್ನು ಮಡಚಿ ಜೇಬಿನಲ್ಲಿ ಇಟ್ಟಕೊಳ್ಳುವ ಶ್ರಮದ ವ್ಯರ್ಥತೆಯನ್ನು ನಾವು ಈ ಕೃತಿಯಲ್ಲಿ ಕಾಣಬಹುದು.'

'ಅಹಂಕಾರದ ಮೊಳಕೆಯನ್ನು ಅರಸಿ, ಬೆಳೆಸಿ, ನೊಂದ ನುಡಿಗಳನ್ನು ಹಾಳೆಗಳ ಮೇಲೆ ಗೀಚಿದಾಕ್ಷಣ ಆತ್ಮ ಸಾಕ್ಷಾತ್ಕಾರವಾಗುವುದಿಲ್ಲ.'

'ಅನನ್ಯತೆಯ ಭಗ್ನ ಸರೋವರದ ಕನಸುಗಳಲ್ಲಿ ಈಜುವ ಮೀನಾಗುವ ಮೊದಲು ಅರುಣನ ಕೆಂಬಣ್ಣವನ್ನು ಕಣ್ತುಂಬಿಕೊಳ್ಳುವುದು ಒಳಿತು.'

'ಕಲಾತ್ಮಕ ಅಸ್ತಿತ್ವದ ಪರಿಧಿಯ ಪರಾಕಾಷ್ಠತೆಯನ್ನು ಮೀರಿ ಇಹ ಲೋಕಕ್ಕೆ ಪಾದಾರ್ಪಣೆ ಮಾಡುವ ಹುಮ್ಮನಸ್ಸಿನ ಚೇತನತೆ ಈ ಕೃತಿಯಲ್ಲಿತ್ತು. '

'ಗರ್ಭಸ್ಥ ಐಡಿಯಾಲಜಿಗಳ ಪ್ರಸ್ತುತತೆಯ ಅನಿವಾರ್ಯತೆಯನ್ನು ಸಂವಹಿಸುವ ಶಕ್ತಿ ಕೃತಿಗಾರರಿಗೆ ಇದೆ.'

'ಮಲೆನಾಡಿನ ಬೆಟ್ಟಗಳ ಮೇಲೆ ಹರಡಿದ ನೆರಳುಗಳ ಮೇಲೆ ರಂಗೋಲಿ ರಚಿಸುವ ಸಾಹಸಕ್ಕೆ ಕೈ ಹಾಕಿದ್ದಾರೆ ಲೇಖಕರು ವಿಸ್ತೀರ್ಣ ಪ್ರಪಂಚದ ವಿಸ್ತಾರದ ವಿದ್ವತ್ ವಿಷಯಗಳ ವಿವೇಚನೆಯಿಂದ ವಿಮುಕ್ತಿ ಹೊಂದುವ ವಿಷಾದನೀಯ ವಿಶೇಷತೆ ಕೃತಿಯಲ್ಲಿದೆ.'

ಪ್ರಿಯರೇ, ಈ ರೀತಿ ವಿಮರ್ಶೆ ಬರೆದರೆ ನಾನು ಖ್ಯಾತ ವಿಮರ್ಶಕನಾಗುವುದರಲ್ಲಿ ಯಶಸ್ವಿಯಾಗಬಲ್ಲೆನೇ ಎಂದು ಕೇಳುತ್ತೇನೆ. ನಿಮ್ಮ ಸಲಹೆಗಳು ಪ್ಲೀಸ್.

■

# ಅರ್ಥವಿಲ್ಲದ ಪತ್ರ

• ಎಂ.ಆರ್. ನಾಗರಾಜ ರಾವ್, ಸಿಂಗಾಪುರ

'ನಾನು ಹೇಳಿದ್ದು ಅರ್ಥವಾಯಿತೆ', 'ನೀನು ಹಾಗೆ ಹೇಳಬಾರದಿತ್ತು'. 'ಹೇಳಿದರೆ ತಪ್ಪೇನು'? 'ತಪ್ಪೇನೂ ಇಲ್ಲ', 'ನಾವೇ ಆದರೆ ಸರಿ ಹೋಗುತ್ತಿತ್ತು. ಎಲ್ಲರೆದುರಿನಲ್ಲಿ ಹಾಗೆ ಹೇಳಬಾರದಿತ್ತು', 'ಸರಿ ಬಿಡಪ್ಪ, ನಿನ್ನಂತೆ ಯಾರೂ ಇರುವುದಿಲ್ಲ. ಎಲ್ಲಕ್ಕೂ ಊಂ... ಊಂ... ಎಂದು ತಲೆ ಆಡಿಸಲಿಕ್ಕೆ ನನಗೆ ಬರುವುದಿಲ್ಲ. ಸಾಲದ್ದಕ್ಕೆ ಅವನೂ ಸೇರಿಕೊಂಡನು. ಇನ್ನು ಕೇಳಬೇಕೇ, ಇಬ್ಬರದೂ ಅದೇ ಮಾತು. ಅದೇ ಮಾತಿನ ಧಾಟಿ. ಈಗ ಇಬ್ಬರಿದ್ದದ್ದು ನಾಲ್ಕು ಮಂದಿಯಾದರು. ಎಲ್ಲರೂ ಅವರೇ. ಏನು ಬಂತು ನನ್ನ ಮಾತಿಗೆ ಕಿಮ್ಮತ್ತಿಲ್ಲ. ಸುಮ್ಮನೆ ಬಡ ಬಡ ಮಾತಾಡಿದರೆ ಬಂತೇ. ಏನೇ ಆಗಲಿ, ನಾನು ಮಾತ್ರ ನಿಮ್ಮ ಮಾತುಗಳನ್ನು ಒಪ್ಪುವುದೇ ಇಲ್ಲ.' 'ಹೋಗಲಿ ಬಿಡಮ್ಮ, ನಿನ್ನ ಮಾತು ನಿನ್ನ ಹತ್ರಾನೇ ಇರುತ್ತೆ. ನಮ್ಮ ಮಾತು ನಮ್ಮ ಹತ್ತಿರಾನೇ ಇರುತ್ತೆ. ಅದಕ್ಕೇ ನೀನು ಯಾರದೋ ಮಾತಿಗೆ ಕಟ್ಟು ಬಿದ್ದು ಹಾಗೆ ಮಾತಾಡಿದ್ದು ತಪ್ಪು ಎಂದು ಸಾರಿ ಸಾರಿ ವಾದ ಮಾಡ್ತೇನೆ'. 'ನೀನು ವಾದಾನಾದ್ರೂ ಮಾಡು, ಸವಾಲಾದ್ರೂ ಹಾಕು. ನಾನು ಹೇಳುವುದಿಷ್ಟೆ. ನಮ್ಮ ಮಾತಿನಲ್ಲಿ ವಿಶ್ವಾಸ, ನಂಬಿಕೆ, ಗೌರವವಿದ್ದರೆ ಒಪ್ಪಿಕೋ, ಇಲ್ಲಾಂದ್ರೆ ಬಿಟ್ಟು ಬಿಡು'.

'ಅದೇ ಬೇಡಾ ಅನ್ನುವುದು. ಈ ದೊಡ್ಡ ಮಾತ್ಯಾಕೆ? ನಂಬಿಕೆ, ಗೌರವ, ವಿಶ್ವಾಸವಿದ್ದರೆ ಇಂಥಿಂಥಾ ಶಬ್ದಗಳನ್ನು ಉಪಯೋಗಿಸಿ ನನ್ನನ್ನು ಮಾತಿನಲ್ಲಿ ಕಟ್ಟಿ ಹಾಕಬೇಡಿ. ವಿಶ್ವಾಸ, ನಂಬಿಕೆ, ಗೌರವವೆಲ್ಲವೂ ಇದೆ. ಅದಕ್ಕೇ ತಾನೇ ಇಷ್ಟೆಲ್ಲಾ ನಾನೂ ಮಾತಾಡ್ತಿರೋದು'.

'ಇರಬಹುದು, ಇದಕ್ಯಾಕೆ ಇಷ್ಟು ದೀರ್ಘವಾಗಿ ಮಾತಾಡಿ ಒತ್ತಾಯ ಮಾಡೋದು ಸರೀನಾ?', 'ಸರಿಯೋ ತಪ್ಪೋ ನನಗೆ ಗೊತ್ತಿಲ್ಲ'. 'ನೀವು ಏನೇ ಹೇಳಿ, ನಿಮ್ಮ ಮಾತನ್ನು ನಾನು ಒಪ್ಪುವುದೇ ಇಲ್ಲ'. 'ಇಲ್ಲಾಂತಂದ್ರೆ ಇಷ್ಟು ಹೊತ್ತೂ ನಿಮ್ಮ ಹತ್ರ ಹರಟೆ ಹೊಡಿಯೋಕೆ ನನಗೆ ಪುರುಸೊತ್ತೂ ಇಲ್ಲ. ನಿಮ್ಮಷ್ಟು ಸಮಯವೂ ನನಗಿಲ್ಲ'. 'ಆಯ್ತು ಮಹರಾಯ್ತಿ. ನಿನ್ನ ಮಾತನ್ನು ನಾವೂ ಒಪ್ಪೋದಿಲ್ಲ, ನಮ್ಮ ಮಾತನ್ನು ನೀನೂ ಒಪ್ಪೋದೂ ಇಲ್ಲ'. 'ಇಬ್ಬರಿಗೂ ಸುಮ್ಮನೆ ಜಗಳ ಯಾಕೆ'? 'ಮತ್ತೆ ತೆಗೆದೆಯಾ ಕ್ಯಾತೆ. ಇಷ್ಟು ಸಣ್ಣ ವಿಷಯಕ್ಕೆ ಜಗಳ ಎಂತೆಲ್ಲಾ ಮತ್ತೆ ಶುರು ಮಾಡ್ತೀಯಲ್ಲಪ್ಪ? ಇದು ಸರೀನಾ? 'ಈ ಮಾತಿಗೆ ಜಗಳ ಯಾಕೆ?' ಎಂತೆಲ್ಲಾ ರೀಲು ಬಿಡ್ತೀಯಲ್ಲಪ್ಪ....'

'ಇದಕ್ಕೇ ಬೇಡಾ ಅನ್ನೋದು. ಇದು ರೀಲಾ.. ಅಲ್ಲ ರಿಯಲ್ಲು. ರಿಯಲ್ಲನ್ನು ನೀನು ರೀಲು ಎಂದು ಮಾತ್ರ ಹಂಗಿಸಬೇಡ'. 'ಹಂಗಿಸುವ ಮಾತೆಲ್ಲಿ ಹೇಳಿದೆ ನಾನು? ರೀಲು ಎಂದು ರಿಯಲ್ಲನ್ನು ಧಾರಾವಾಹಿಯಾಗಿ ಎಳೆದರೆ ಇನ್ನೇನು ಹೇಳಬೇಕು?'

'ಇನ್ನೇನೂ ಹೇಳಬೇಡ, ನಮ್ಮ ಪಾಲಿಗೆ ನಮ್ಮನ್ನು ಬಿಟ್ಟು ಬಿಟ್ಟರೆ ಸಾಕು'. 'ಇಷ್ಟಕ್ಕೂ ನಾನೇನೂ ಕಟ್ಟಿಕೊಂಡಿಲ್ಲ. ನೀನೇ ಎಲ್ಲಾ ಬಾಯಿಗೆ ಬಂದ ಹಾಗೆ ಬೊಗಳೆ ಬಿಡೋದು'. 'ಅದೇ ನಾನೂ ಬೇಡಾ ಅನ್ನೋದು', 'ಬೇಡಾ ಎನ್ನುತ್ತೀಯಾ? ಅದನ್ನೇ ಮಾತಾಡಿ ನನ್ನ ತಲೆ ಕೆಡಿಸ್ತೀಯಲ್ಲಪ್ಪಾ?', 'ನಾನೇನೂ ನಿನ್ನ ತಲೆ ಕೆಡಿಸಿ ತಲೆ ತಿನ್ನುತ್ತಿಲ್ಲ. ಏನೋ ಒಂದು ಮಾತು ಹೇಳಿದೆ. ಅದಕ್ಕೆ ಆಡಬಾರದ ಮಾತೇನೂ ಆಡಿಲ್ಲ'.

'ಮಾತಿಗೆ ಮಾತು ಪೋಣಿಸಿ ಅದನ್ನೇ ಇನ್ನೂ ಎಳೀತಿದ್ದೀಯಲ್ಲಾ? ಏನೋ ಒಂದು ಮಾತು ಬರುತ್ತೆ, ಹೋಗುತ್ತೆ. ಅದನ್ನೇ ನೀನು ಇನ್ನೂ ಎಳೆಎಳೆಯಾಗಿ ಹತ್ತೀನಾ

ಹಿಂಜಿದಂತೆ ಹಿಂಜಿದರೆ ಕೈಗೆ ಬರುತ್ತಾ?'

'ಕೈಗೆ ಬರುತ್ತೋ ಬಿಡುತ್ತೋ, ನಾನು ಮಾತ್ರ ನನ್ನ ಮಾತನ್ನು ಹಿಂದಕ್ಕೆ ತಗೊಳ್ಳಲ್ಲ. ಬಿಡು, ಬೇಡಾ ಅಂತ ಅಂದವರ್‍ಯಾರು? ನಾನು ಬಂದಾಗ ನೀನೇ ಮಾತಿಗೆ ಕಾಲು ಕೆರೆದುಕೊಂಡು ಜಗಳಕ್ಕೆ ಬಂದ ಹಾಗೆ ಬರುತ್ತೀಯ. ಬಂದದ್ದು ಯಾತಕ್ಕೆ ಎಂದು ಮರೆತೇ ಹೋಗಿರುತ್ತೆ'.

'ಮರೆತು ಹೋಗುವ ಮಾತೆಲ್ಲಿ ಹೇಳಿದೆ? ಜ್ಞಾಪಕ ಇಟ್ಟುಕೊಂಡೇ ಮಾತಾಡು, ನಾನೂ ಕೇಳ್ತೇನೆ. ಆಮೇಲೆ ನೀನು ಕೇಳಿಲ್ಲ, ಹೇಳಿಲ್ಲ, ಅದಕ್ಕೆ ನೀನು ಅವಕಾಶ ಮಾಡಿ ಕೊಡಲಿಲ್ಲ ಅಂತ ಮಾತು ಮಾತಿಗೆ ಅದನ್ನೇ ಎಳೀತಾ ಹಂಗಿಸುತ್ತಾ ಜಗಳ ತೆಗೆದು ಹರಟೆ ಹೊಡಿಯೋಕೆ ಪುರುಸೊತ್ತೂ ಇಲ್ಲ, ಜಗಳ ಮಾಡೋಕೂ ನನಗೆ ಬರೋದಿಲ್ಲ, ಅದೂ ನಿನ್ನೆದುರಿಗೆ. ಏಕೆಂದ್ರೆ ನೀನು ಮಾತಿನ ಮಲ್ಲ. ಯಾವ ಮಾತಿಗೂ ಸಿಕ್ಕಿ ಹಾಕಿಕೊಳ್ಳೋದೇ ಇಲ್ಲ. ನಾನು ಸುಮ್ಮನೇ ಬಡ ಬಡಾ ಅಂತ ಮಾತಾಡಿದರೆ ಏನು ಬಂತು. ಮಾತು ಆಡುವುದಾದರೆ ನಿನ್ನಂತೆ ಮಾತಾಡಬೇಕು. ಮಾತಾಡಿ ಸೈ ಅಂತ ಅನ್ನಿಸಿಕೊಳ್ಳಬೇಕು. ಇಲ್ಲಾಂತಂದ್ರೆ ನನ್ನನ್ನು ಗೂಬೆ ಮಾಡ್ಬಿಡ್ತೀಯಾ, ಅದಕ್ಕೇ ಆ ಮಾತೆಲ್ಲಾ ನಿನಗೇ ಬಿಟ್ಟು ಬಿಟ್ಟಿದ್ದೇನೆ.'

'ಹೋಗಲಿ, ಏನೋ ಹೇಳೋದಕ್ಕೆ ಬಂದೆ! ಅದೇನು ಅಂತ ಮೊದಲು ಹೇಳಿ ಹೋಗು...'. 'ಇನ್ನೇನೂ ಇಲ್ಲ ಸೀತಮ್ಮ, ನಿಮ್ಮ ಮಗ ಸೈಕಲ್ಲಿನಲ್ಲಿ ಬರ್ತಿದ್ದ. ಆ ಕಡೆಯಿಂದ ಸೋಮಣ್ಣ ಸ್ಕೂಟರಲ್ಲಿ ಬರ್ತಾ ಇದ್ದ. ಎದುರಿಗೆ ಲಾರಿ ಬರ್ತಾ ಇತ್ತು. ಅದನ್ನು ಅವಾಯ್ಡ್ ಮಾಡಲು ಹೋಗಿ ನಿನ್ನ ಮಗನಿಗೆ ಸ್ಕೂಟರ್ ಡಿಕ್ಕಿ ಹೊಡೀತು. ಸೈಕಲ್ ಕೆಳಗೆ ಬಿತ್ತು. ನಿನ್ನ ಮಗನೂ ಕೆಳಗೆ ಬಿದ್ದ. ಕೈಕಾಲು ಸ್ವಲ್ಪ ತರಚಿಕೊಂಡಿದೆ. ಅವನನ್ನು ನನ್ನ ಗಾಡಿಯಲ್ಲೇ ಕರೆದುಕೊಂಡು ಹೋಗಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಅಲ್ಲೇ ಅಡ್ಮಿಟ್ ಮಾಡಿದ್ದೇನೆ. ಇನ್ನೇನೂ ಪ್ರಾಣಾಪಾಯವಾಗಿಲ್ಲ. ಒಂದು ಐದಾರು ದಿನ ಆಸ್ಪತ್ರೆಯಲ್ಲೇ ಇರಬೇಕು ಅಷ್ಟೇ. ಅದನ್ನೇ ಹೇಳೋಣಾಂತ ಬಂದೆ. ವಿಷಯ ಎಲ್ಲಿಂದ ಎಲ್ಲಿಗೋ ಹೋಯ್ತು'.

'ಏನು ಶಂಕ್ರಣ್ಣಾ, ಈ ವಿಷಯವನ್ನು ಇಷ್ಟು ತಣ್ಣಗೆ ಹೇಳ್ತಾ ಇದ್ದೀರಲ್ಲಾ, ನಿಮಗೆ ಜ್ಞಾನ ಇಲ್ವೇ? ಮಗು ಪಾಪ! ರಕ್ತ ಬರಿಸಿಕೊಂಡು ನರಳ್ತಾ ಇರ್ತಾನೆ, ಇಷ್ಟು ನಿಧಾನವಾಗಿ ಈಗ ಹೇಳ್ತಾ ಇದ್ದೀರಲ್ಲ. ನಿಮ್ಮ ಬುದ್ಧಿಗೆ ಏನು ಹೇಳಬೇಕು. ಮೊದಲು ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋಗಿ. ನಾನು ಮೊದಲು ನನ್ನ ಮಗನನ್ನು ನೋಡ್ಬೇಕು'.

'ಹಾಗೇ ಆಗ್ಲಿ, ನಿಮ್ಮ ಆ ತುಂಟಾಟದ ಮಗನನ್ನೂ ನೋಡಿ, ಆಸ್ಪತ್ರೇಲೇ ಇರ್ತಾನೆ, ಗೆಲುವಾಗಿಯೇ ಇದ್ದಾನೆ. ಬೇಗ ಮನೆಗೆ ಬೀಗ ಹಾಕಿ, ಕೈಲಿ ಸ್ವಲ್ಪ ಕಾಸೂ ಇಟ್ಕೊಳ್ಳಿ. ಏನಕ್ಕಾದರೂ ಬೇಕಾಗುತ್ತೆ. ಪಾಪ ಮಗು! ಆಸ್ಪತ್ರೆಯಲ್ಲಿ ನರಳ್ತಾ ಇರ್ತಾನೆ' ಎಂದಾಗ ಅದು ಎಷ್ಟು ಕೇಳಿಸಿತೋ ಇಲ್ವೋ, ಬಾಗಿಲು ಹಾಕಿಕೊಂಡು, ವ್ಯಾನಿಟಿ ಬ್ಯಾಗ್ ಹೆಗಲಿಗೆ ಹಾಕಿಕೊಂಡು ಹೊರಟೇ ಬಿಟ್ಟಳು. ಪಾಪ! ಅವರ ಮಗ ಆಸ್ಪತ್ರೆಯಲ್ಲಿ ನರಳ್ತಾ ಮಲಗಿರ್ತಾನೆ ನೋಡಬೇಕಲ್ಲವಾ......'

ಸದ್ಯ! 'ನಾನೇ ಡಿಕ್ಕಿ ಹೊಡೆದೆ ಎಂದು ನಿಮ್ಮ ಅಮ್ಮಂಗೆ ಹೇಳ್ಬೇಡಾ ಮರಿ' ಎಂದು ಮೊದಲೇ ಹೇಳಿ ಬಂದಿದ್ದೆ. 'ಅದ್ಯಾರೋ ಅಂಕಲ್ ಡಿಕ್ಕಿ ಹೊಡೆದು ಹೊರಟೇ ಹೋದ್ರು ಎಂದು ಹೇಳಪ್ಪಾ' ಎಂದು ಕೈ ಮುಗಿದು ಬೇಡಿಕೊಳ್ಳುವುದನ್ನು ಮರೆಯಲಿಲ್ಲ.

■